# ಕಟ್ಟೆ ಪುರಾಣ

# ಮುನ್ನುಡಿ

ಹೆಸರೇ ಈ ನಾಟಕದ ಅಂತರಂಗವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ನಮ್ಮಲ್ಲಿ ಕಟ್ಟೆಪುರಾಣದ ಹವ್ಯಾಸ ಬಹಳ. ಇಂಥ ಪುರಾಣವಂದಿಗರಲ್ಲಿನ ಹರಟೆಯ ವಿಷಯವೆಂದರೆ, ಸಮಾಜದ ವಿಮರ್ಶೆ. ತಾನೊಬ್ಬನಲ್ಲದೆ ಪ್ರಪಂಚವೆಲ್ಲ ಅವರ ತುಲನೆಗೆ, ಅವಹೇಳನೆಗೆ ಗುರಿಯಾಗುವುದು. ನಿಂದಾಭಾವದಿಂದಲೇ ಟೀಕಿಸುವ ಸ್ವಭಾವ ಅವರದು. ಹಾಗೆ ಟೀಕಿಸುವಾಗ ಉಪಯೋಗಿಸುವ ಶಬ್ದಗಳು ಅಷ್ಟೇ ಕಠಿಣ, ಕ್ರೂರ, ವಿಷಪೂರಿತವಾದುವು. ಅಂಥ ಚೇಷ್ಟೆಗಳನ್ನು ಕೇಳುವಾಗ ನಮಗೂ ಕಿವಿಗೆ ಇಂಪಾಗಬಹುದು. ಆದರೆ ಆ ನಿಂದೆಗೆ ಬಲಿಯಾಗುವ ಬಡಪಾಯಿಯು ಆತ್ಮಹತ್ಯೆಮಾಡಿಕೊಳ್ಳಬಪುದು. ಇವುಗಳಿಂದೆಲ್ಲ ನೊಂದ ಹೃದಯವೇ ನನ್ನನ್ನು ಈ ನಾಟಕಕ್ಕೆ ಪ್ರೇರಿಸಿತು. ಅದನ್ನು ಬರೆಯುವಾಗ ನಿರ್ಧಾಕ್ಷಿಣ್ಯವಾಗಿ ಟೀಕಾಚಾರ್ಯರ ನುಡಿಗಳನ್ನು ಉಪಯೋಗಿಸಿದ್ದೇನೆ. "ಮುಂಡೆ" ಯೆಂದು ನಾಲಗೆ ಇಳಿಸುವವರ ಮಾತಿನಲ್ಲಿ "ವಿಧವೆ" ಎಂಬ ಸೌಮ್ಯತರ ಪದಪ್ರಯೋಗವನ್ನು ಮಾಡಲಿಲ್ಲ.

ಅವರ ಟೀಕೆಗಳನ್ನು ಕುರಿತು ಒಂದು ಟೀಕೆ. ಅವರ ಮಾತುಗಳಲ್ಲಿ ಹುರುಳಿಲ್ಲವೆಂದಲ್ಲ. ಸತ್ಯವಿದೆ, ಸುಳ್ಳೂ ಇದೆ, ಸೊಗಸೂ ಇದೆ, ಅಸಹ್ಯತೆಯೂ ಇದೆ; ಗುಣವೂ ಇದೆ, ದೋಷವೂ ಇದೆ . . . . ಅವುಗಳನ್ನು ನಾನು ಅಸಹನೆಯಿಂದ ಕಾಣುವುದು ಇವುಗಳಿಂದಾಗಿ ಅಲ್ಲ. ಅವುಗಳ ಹಿಂದಿರುವ ದುರುದ್ದೇಶ, ಸ್ವಾರ್ಥ ಸಂಕುಚಿತ ಭಾವಗಳ ದೆಸೆಯಿಂದ.

ಈ ನಾಟಕವನ್ನು ಏಕಾಂಕ ದೃಶ್ಯವನ್ನಾಗಿ, ಆಡಬಲ್ಲ, ಬರೆಯಬಲ್ಲ ಭಾಷೆಯಲ್ಲೂ ಬರೆದಿರುತ್ತೇನೆ. ಗ್ರಾಮ್ಯದ ಛಾಯೆಯು ಭಾಷಾಸರಣಿಯ ಮೇಲೆ ಬೀಸಿದೆ. ಆದರೆ ಕೇವಲ ಗ್ರಾಮ್ಯವೂ ಆಗದಂತೆ ಯತ್ನಮಾಡಿರುವೆ. ನಾಟಕಪ್ರೇಮಿಗಳಿಗೆ ಇಂದೊಂದು ಪ್ರೇಮದ ಕಾಣಿಕೆ.

ಇತಿ,

ತಾ. ೨೮–೨–೧೯೩೩,
ಮಂಗಳೂರು.

ಶಿವರಾಮ ಕಾರಂತ.

# ಪಾತ್ರವರ್ಗ

**ರಂಗಣ್ಣಯ್ಯ** — ರಸಿಕನೆಂದು ಊರವರ ಗ್ರಹಿಕೆ. ೩೦–೩೫ ವಯಸ್ಸು. ಊಟಕ್ಕೆ ಕೊರತೆಯಿಲ್ಲ; ದುಡಿದೇ ತಿನ್ನುವ ಜೀವಿಯಲ್ಲ. ಹರಟೆಯಲ್ಲಿ ಹೊತ್ತು ಕಳೆಯಬೇಕು. ಸಮಯ ಕಳೆಯಲು ಹಾದಿಯಲ್ಲಿ ಹೋಗುವವರನ್ನೆಲ್ಲ ಕರೆದು ಮಾತನಾಡಿಸುವುದು ರೂಢಿ. ಅವರಿಗೂ ರಂಗಣ್ಣನ ಮಾತಿನಲ್ಲೊಂದು ಮೆಚ್ಚುಗೆ; ಅಗ್ಗದ ಎಲೆ ಅಡಿಕೆ ಸಿಗುತ್ತದೆಂಬ ಆಸೆ.


**ರಾಮಣ್ಣಯ್ಯ** — ರಂಗಣ್ಣನ ಕೊರಳ ಪ್ರಾಣ. ಯಾರಿಲ್ಲದಿದ್ದರೂ ಅವನ ಪುರಾಣ ಕೇಳಲು ಇವನಿರುವ. ಅವನ ವಯಸ್ಸು, ಸ್ಥಿತಿ ಅವನಂತಿಲ್ಲ; ಆದರೂ ಪೈಗಳ್ಳ.

**ವೆಂಕಟ್ರಾಯರು** — ಊರಿನ ಶ್ಯಾನುಭಾಗರು; ಕಟ್ಟೆಯ ಸದಸ್ಯರಲ್ಲೊಬ್ಬರು.

**ಶ್ರೀಧರ ಭಟ್ಟರು** — ಊರಿನ ದೇವಾಲಯದ ಅರ್ಚಕ. ಕಟ್ಟೆಗೆ ಬರುವವರು. ಮಾತು ಬಾರದಿದ್ದರೂ ಪರನಿಂದೆಯಲ್ಲಿ ಒಂದು ಆನಂದ. ಬಡವರು.

**ಐತಪ್ಪ** — ಹೊಟ್ಟೆಗಿಲ್ಲ; ಬಡವರಲ್ಲಿ ಬಡವ. ಕೆಲವು ಬಾರಿ ಬೇಡಿಯೇ ಜೀವನ; ಈಗ ತಿರುಪಯೆತ್ತಲು ದಾಸನಾಗಿರುವ.

**ಭಾಗಮ್ಮ** — ರಾಮಣ್ಣನ ಹೆಂಡತಿ; ಭಟ್ಟರ ಮಗಳ ಗೆಳತಿ.



**ರಂಗಣ್ಣ:** "ಹೋ ಮರತೇಹೋಯಿತು; ಇವತ್ತು
ಅಮಾವಾಸೆ ಒಪ್ಪತ್ತು."

# ಕಟ್ಟೆ ಪುರಾಣ

(ರಂಗಣ್ಣಯ್ಯನ ಮನೆಯ ಮುಂದಿನ ಪಡಸಾಲೆ. ರಂಗಣ್ಣಯ್ಯನು ಕಾಲುಕಟ್ಟಿಕೊಂಡು, ಎದುರಿಗೆ ಒಂದು ರಾಮಾಯಣವನ್ನು ಬಿಡಿಸಿ ಕುಳಿತಿರುವನು. ಬಳಿಯಲ್ಲೇ ಪೀಕದಾನಿ. ಈಚೆ ಎಲೆಯ ಹರಿವಾಣ. ಒಂದೆರಡು ಹಿಡಿ ಇಸ್ಪೀಟುಗಳು.)

**ರಂಗಣ್ಣಯ್ಯ:**— ಅಯ್ಯಯ್ಯಯ್ಯೋ, ಏನಾಯ್ತು ಇವರಿಗೆ? ರಾಮಣ್ಣ, ಸುಬ್ಬು, ತಿಮ್ಮು ಯಾರೊಬ್ಬರೂ ಇಲ್ಲ. ನಿತ್ಯದ ಸೇವೆ ನಡಿಸಲು ಬರುವ ಐತಪ್ಪನೂ ಸಹ . . . ಏನು, ನಾಲ್ಕು ಹನಿ ಮಳೆ ಬಂದಿತೆಂದರೆ ದೊಡ್ಡ ಮಳೆಗಾಲವೇ ಬಂದಿತೆಂದು ತಿಳಿದರೋ ಏನು? ಇರಬೇಕು, ಇರಬೇಕು— ಬೀಜ, ಹೂಟೆ ಯೆಂದು ಗದ್ದೆ ಕೆಸರಲ್ಲಿ ಬಿದ್ದಿರಬೇಕು ಎಲ್ಲರು. ಆದರೂ ರಾಮಣ್ಣ ಬರಲಿಲ್ಲವೆಂದರೆ ಆಶ್ಚರ್ಯ. ಎಷ್ಟು ಕೆಲಸವಿದ್ದರೂ ಬಂದು ನನ್ನ ಮುಖ ನೋಡದೆ ಹೋಗುವ ಮಗನಲ್ಲ. ಇವತ್ತು ಅವನೂ ಇಲ್ಲ.

ಅಲ್ಲ, ಬ್ರಾಹ್ಮಣರಾಗಿ ಹುಟ್ಟ ಹೊಲಮನೆ, ಕೆಸರುಗೊಬ್ಬರ ಎಂದು ತಿರುಗುತ್ತಾರಲ್ಲ— ಏನು ಮರುಳು? ಹೊಟ್ಟೆಗೆ ಕಾಳು ಕಡಿಮೆಯಾದರೆ ಇವರು ನೇಗಿಲು ಹಿಡಿಯಲಿಕ್ಕೂ ಅಡ್ಡಿಯಿಲ್ಲ. ಏನೋ, ಇದ್ದ ನಾಲ್ಕು ಮುಡಿ ಗದ್ದೆಯನ್ನು, ನನ್ನಂತೆ ಗೇಣಿಗೆ ಕೊಟ್ಟು, ಸುಖವಾಗಿ ಬಂದ ಅಕ್ಕಿಯನ್ನು ತಿಂದುಕೊಂಡು, ಇರ ಬಾರದೇ? ಬ್ರಾಹ್ಮಣರಿಗೆ ಬೇಸಾಯವೇಕೆ?

ಹಾಳಾಗಲಿ ಅವರ ಸುದ್ದಿ. ರಾಮಾಯಣವನ್ನಾದರೂ ಇಷ್ಟು ಓದುವ. ಅದನ್ನು ಕೇಳುವುದಕ್ಕಾದರೂ ನಾಲ್ಕು ಬೋಳು ತಲೆಗಳು ಬರುತ್ತಿದ್ದುವು. ಇವತ್ತು ಅವೂ ಇಲ್ಲ. ಹಾಂ - ಮರೆತೇ ಬಿಟ್ಟೆ--ಅಮಾವಾಸ್ಯೆ ಒಪ್ಪತ್ತು. ಉಪವಾಸ ಎಂದು ಹೇಳಿ, ಉದ್ದಿನ ಕಡುಬು ಬೇಯಿಸಲಿಕ್ಕೆ ಕುಳಿತರೆಂದು ಕಾಣುತ್ತದೆ. ಪುಣ್ಯಾತ್ಮರಪ್ಪ, ಪುಣ್ಯಾತ್ಮರು. ಈ ಸ್ವಾಮಿಯ ರಂತಹ ಪುಣ್ಯಾತ್ಮರು ಯಾರಿಲ್ಲ ಏನು ಪಡೆದು ಬಂದರೋ! ಹೆದರಿಸುವವರು ಅನ್ನಲಿಕ್ಕೆ ಗಂಡಂದಿರಿಲ್ಲ . . ಅವರು ಮಾಡಿದ್ದು, ಅವರು ಬಿಟ್ಟದ್ದು. ಮನೆಗೂ ಅವರು ಯಜಮಾನಿಯರು, ಊರ ಹೊರಗೂ ಅವರೇ! ಉಳಿದವರೆಲ್ಲ ಗಂಜಿನೀರು ಕುಡಿಯು ತ್ತಿದ್ದರೆ, ಬೆಳಿಗ್ಗೆ ತಂಗಳು ಊಟವಿಲ್ಲ ಎಂದು ಹೆಸರು ಗಂಜಿ— ಹತ್ತು ಘಂಟೆಯಾಗುತ್ತಲೂ, ಜೀವಸಂಕಟ ಎಂದು ಬೆಲ್ಲದ ಪಾನಕ . . . ಮಧ್ಯಾಹ್ನಕ್ಕೆ ಇದ್ದೇ ಇದೆ—ಒಂದು ಸೇರು ಅಕ್ಕಿ ಅನ್ನ, ಬೆಳ್ತಿಗೆ* ಬೇರೆ ಅದರಲ್ಲಿ, ಒಂದು ಪಾವು ಉಪ್ಪಿನಕಾಯಿ ರಸ, ಅರ್ಧಸೇರು ಹಸಿಮೆಣಸು. ನಿತ್ಯಕಟ್ಟಲೆ ಊಟವಾಗು ವಾಗ ಝಾವ ಹೊತ್ತು ಸರಿಯುತ್ತದೆನ್ನಿ. ಊಟವಾದ ಮೇಲೆ ಸಣ್ಣದೊಂದು ನಿದ್ದೆ ತೆಗೆದು ಬಂದರೇ—ರಂಗಣ್ಣಯ್ಯನ ಕಟ್ಟೆಗೆ ಪುರಾಣ ಕೇಳಲಿಕ್ಕೆ. ಅತ್ತ ಮನೆಕೆಲಸ ತಪ್ಪಿಸಿದಹಾಗಾ ಯಿತು. ಇತ್ತ ನನ್ನ ಲೆಕ್ಕದಿಂದ ಪಂಥೇರು ಪುಣ್ಯ ಸಂಪಾಸಿದ ಹಾಗಾಯಿತು . . ಸಾಯಂಕಾಲ ಮನೆಗೆ ಹೋದರೆ ಊಟವಿಲ್ಲ, ಅಚ್ಛೇರು ಅವಲಕ್ಕಿ ಮೊಸರು ಇಷ್ಟೆ. ಏಕಾದಶಿಯ ಸುಖ ಅನು

*ಒಂದು ಜಾತಿಯ ಅಕ್ಕಿಯ ಹೆಸರು.

ಭವಿಸಬೇಕಾದರೆಂತೂ ಕೆಂಪು ಸೀರೆ ಉಟ್ಟೇಹುಟ್ಟಬೇಕು . . . . ಸಾಕು ಇವರ ಪುರಾಣ. ರಾಮಾಯಣ ಇಷ್ಟು ಓದುವ . . . (ರಾಮಾಯಣ ತೆರೆಯುತ್ತಲೇ ನಗುವನು.) ಹ್ಹ ಹ್ಹ "ದಶಶಿರನ . . " (ಎಂದು ಓದುವನು.)

(ಪ್ರವೇಶ ರಾಮಣ್ಣಯ್ಯ.)

ಹ್ಹ ಹ್ಹ . . . ಬಂದೆಯೋ ರಾಮಣ್ಣ . . . ನಿನ್ನನ್ನು, ಮಳೆ ಬಂದಿತು ಎಂದು ನಿನ್ನ ಹೆಂಡತಿ ನೇಗಿಲು ನೊಗ ಹೊರಿಸಿ, ಗದ್ದೆ ಉಳಲಿಕ್ಕೆ ಕಳುಹಿಸಿದಳೋ ಎಂದು ನೋಡಿದೆ. ಇಷ್ಟು ಹೊತ್ತಾದರೂ ಒಂದು ಹುಳು ಸಹ ಇಲ್ಲವಲ್ಲ. ಇಷ್ಟರಲ್ಲೇ ರಂಗಣ್ಣಯ್ಯನ ಲೆಕ್ಕಕ್ಕೆ ಒಂದು ಸೂಡಿ ಎಲೆ, ಮುಕ್ಕಾಲು ಸೇರು ಹೊಗೆಸೊಪ್ಪು ಖರ್ಚಾಗುತ್ತಿತ್ತು . . . .

**ರಾಮಣ್ಣಯ್ಯ:**— ಹ್ಹ ಹ್ಹ . . . . ರಂಗಣ್ಣಯ್ಯನ ತಮಾಷೆ ಅಂದರೆ ತಮಾಷೆಯಪ್ಪ. ಮನೆಯವಳು, ನೀನೆಂದ ಹಾಗೆಯೇ, 'ಏನು ಮಳೆ ಬಿದ್ದರೂ ಬೀಜ ಹಾಕುವುದಿಲ್ಲವೇ? ಗದ್ದೆಗೆ ಹೋಗುವದಿಲ್ಲವೇ—ಏನು?' ಎಂದು ಗದರಿಸಿದಳು. ನಾನೂ 'ಆಯ್ತು ಅದಕ್ಕೇ ಹೊರಟೆ' ಎಂದು ಎದ್ದೆ. ಅವಳು ಅಲ್ಲಿ ಉಳಿದಳು, ನಾನು ಇಲ್ಲಿಗೆ ಬಂದೆ.

**ರಂಗ:**—ನಿನಗೆ ನಾನು ಅಂದದ್ದೇನು? ಆ ಸುಡುಗಾಡು ಮನೆಯವರ ಹೆಣ್ಣು ಬೇಡ. ಅವರ ಕುಲವೇ ಹರಕು ಬಾಯಿಯ ಕುಲ. ಅಲ್ಲಿಯ ಹುಡುಗಿ ತಂದರೆ ನಿನ್ನನ್ನು ಸಂತೆಯಲ್ಲಿ ಆರು ಕಾಸಿಗೆ ಮಾರಿ, ಮೂರು ಕಾಸಿನ ಹುರಿಯಕ್ಕಿ ಕೊಂಡು, ಇನ್ನು ಮೂರು ಕಾಸು ಸೊಂಟಕ್ಕೆ ಸಿಕ್ಕಿಸಿಕೊಂಡು ಬಂದಾಳು ಅಂದಿದ್ದೆನಲ್ಲ. ನೀನು ಕೇಳುತ್ತೀಯಾ? ಹುಡುಗಿ ಬೆಳ್ಳಗಿದ್ದಾಳೆ—

ಎಂದು ಲಗ್ನವಾದೆ. ಬೆಳ್ಳಗಿದೆ ಎಂದು ಜೇಡಿ ಬಳೆದ ಗೋಡೆ ಮದುವೆಯಾಗಬಹುದಿತ್ತು ಅದರ ಬದಲು.

**ರಾಮು:**— ಆಯಿತಲ್ಲ; ಅದರ ಸುದ್ದಿ ಬಿಡು. ಇನ್ನೂ ಹೊಸ ಹುಡುಗಿ. ಸಂಸಾರದಲ್ಲಿ ನುರಿತ ಮೇಲಲ್ಲವೇ ಸುಖದುಃಖ ಗೊತ್ತಾಗುವುದು? ಅಲ್ಲದೆ ಅವಳ ಹತ್ತಿರ ಜಗಳವಾಡಿದರೆ ಮೊದಲಿನ ಹೆಂಡತಿಯ ಮಕ್ಕಳ ಜೀವತಿಂದಾಳಲ್ಲ. ಅಂತು ಅಡುಗೆಗಿಡುಗೆ, ತನ್ನ ಕೆಲಸ ಎಷ್ಟು ಬೇಕೋ ಅಷ್ಟು ಚೊಕ್ಕ ವಾಗಿಯೇ ಸಾಗಿಸಿಕೊಂಡು ಹೋಗುತ್ತಾಳೆ. ಅಡುಗೆ ಅನ್ನು ವಾಗ ನೆನಪಿಗೆ ಬಂತು—ಅವಳು ನೆರೆದು ಮನೆಗೆ ಬಂದ ಮೇಲೆ ನಿನ್ನನ್ನು ಮನೆಗೆ ಕರೆಯಲಿಲ್ಲ ಅಲ್ಲವೇ? ನನಗೂ, ಕರೆದು ಒಂದು ದಿನ ಹುಳಿಯನ್ನ ನಿನಗೆ ಮಾಡಿಸಿ ಹಾಕಬೇಕು ಎಂದಿತ್ತು.

**ರಂಗ:**— ಏನು! ಹುಳಿಯನ್ನ— ಅನ್ನುತ್ತಲೇ ನಿಲ್ಲಿಸಿದೆ. ನನಗೆ ಪರಮಾನಗಿರಮಾನ್ನ ಇದ್ದರೆ ಅಜೀರ್ಣವಾದೀತು— ಎಂದು ಗ್ರಹಿಸಿದೆಯಾ?

**ರಾಮು:**— ಹಾಗಲ್ಲ ರಂಗಣ್ಣ, ಅವಳ ಹುಳಿಯನ್ನದ ಕೈ ಅಂದರೆ ಅಂಥದು.

**ರಂಗ:**— ಹೌದು, ಹೌದು, ಅವಳಿಗೇ ಹುಳಿ ಅಷ್ಟಿದ್ದ ಮೇಲೆ ಅನ್ನ ಸುಮ್ಮನಿರುತ್ತದೆಯೇ! ಅದಗಲ್ಲೂ ಬೇರೆ, ಅವಳ ಅಪ್ಪ ಬೆಂಗ ಳೂರಲ್ಲಿ ಯಾರೋ ಮೂರು ನಾಮದವರ ಮನೆಯಲ್ಲೇ ಅಡು ಗೆಗೆ ಇದ್ದನಂತೆ. ಮೂರು ನಾಮದವರು ಅಂದರೆ, ಹೆಣ ಸತ್ತರೆ ಹುಳಿಯನ್ನದಲ್ಲಿ ಹೂಳಿಡುವವರು.

**ರಾಮು:**— ನೀನು ಒಂದು ಸಾರಿ ಉಂಡರೆ ಇಷ್ಟೆಲ್ಲ ತಮಾಷೆಮಾಡ ಲಿಕ್ಕಿಲ್ಲ —

**ರಂಗ:**— ಆಗಲಿ, ಆಗಲಿ, ನಿನ್ನ ಹೆಂಡತಿಯು ನಳಪಾಕ ಒಂದು ದಿನ ಊಟಮಾಡಲಿಕ್ಕೆ ಬರುತ್ತೇನೆ. ನಿನ್ನೊಟ್ಟಿಗೆ ನನಗೂ ಮಂಗಳಾರತಿ ಮಾಡಿದರೆ ಮಾತ್ರ ದೇವರೇ ಗತಿ. ಇರಲಿ ಬಿಡು. ಈಗ ರಾಮಾಯಣ ತೆಗೆಯಲೇ, ಈ ಗೀತೆ ಪಾರಾಯಣ ಶುರುಮಾಡಲೇ?

**ರಾಮು:**— ಇವತ್ತೆಲ್ಲಿನ ಗೀತೆ ತಂದೆ? ಇಷ್ಟು ದಿನ ಬರೇ ನಿನ್ನ ರಾಮಾಯಣ ಕೇಳಿ ಕೇಳಿ ಸಾಕಾಗಿತ್ತು. ಈಗ ಭಗವದ್ಗೀತೆ ಬೇರೆ ಬಂತೆ! ಆದರೂ ರಂಗಣ್ಣನ ದೈವಭಕ್ತಿಯುಂದರೆ ಅಪಾರವಪ್ಪ. ಸದಾ ಪುರಾಣ ಗೀತೆಯೆಂತಲೇ ಇದ್ದಾನೆ ಪುಣ್ಯಾತ್ಮ.

**ರಂಗ:**— ಏ ಮಂಕು, ನಿಜಕ್ಕೂ ಗೀತೆ ಹೌದೆಂದು ತಿಳಿದೆಯಾ? ಇಸ್ಪೀಟು ಪುರಾಣ ಶುರುಮಾಡುವಾ—ಎಂದು ಹೇಳಿದೆ ನಾನು.

**ರಾಮು:**— ಹ್ಹ ಹ್ಹ ಹ್ಹಾ. ರಂಗಣ್ಣನ ತಮಾಷೆಯೇ! ನಾನು ನಿಜಕ್ಕೂ ಗೀತೆಯೇ ಎಂದು ತಿಳಿದಿದ್ದೆ . . ಇಸ್ಪೀಟೇ . . ಹ್ಹ ಹ್ಹ . . . ಇಸ್ಪೀಟು ಅಂದರೆ, ಇಬ್ಬರೇ ಏನು ಆಡುವುದು? ಬೇರೆ ಯಾರೂ ಇಲ್ಲ. ಆಡಿದರೆ ಕತ್ತೆ ಆಟ ಆಡಬೇಕು. ಆಡುವ ಮೊದಲೇ ಕತ್ತೆ ಯಾರು ಆಗುತ್ತಾರೆ ಅನ್ನಬಹುದು.

**ರಂಗ:**— ಹೌದು ಹೌದು. ರಂಗಣ್ಣಯ್ಯನಿಂದ ಕತ್ತೆ ಅನಿಸಿಕೊಂಡರೆ ನಿನಗೆ ಅವಮಾನ ನಿನ್ನ ಆ ಜೇಡಿ ಹುಡುಗಿ ನಿನ್ನನ್ನು ಕತ್ತೆಯಾಗಿ ಮಾಡಿದರೂ ನಿನಗೆ ಸಿಟ್ಟಿಲ್ಲ.

**ರಾಮು:**— ಸಾಕು, ಸುಮ್ಮನಿರು. ರಾಮಾಯಣ ಓದು, ಬಹಳ ದಿನ ಆಯಿತು ಕೇಳದೆ.

**ರಂಗ:**— ರಾಮಾಯಣವೇ! ಆಯ್ತು ಓದುವ. ನಾಲ್ಕು ಜನ ಆಗುವ ವರೆಗೆ ಅದೇ ಗತಿ. (ಓದುತ್ತ) ಹ್ಹ. ಹ್ಹ . . .

**ರಾಮು:**— ಏನು ನಕ್ಕು ಬಿಟ್ಟೆ?

**ರಂಗ:**— ನೀನು ಬರುವಾಗಲೂ ಅದನ್ನೇ ಕಂಡು ನಕ್ಕದ್ದು. "ದಶಶಿರನ"— ಎಂದು ಇದೆಯಲ್ಲ. ನನಗೆ ಇಷ್ಟು ರಾಮಾಯಣ ಓದಿದರೂ 'ಈ ದಶಶಿರನ' ಬಂದ ಕೂಡಲೆ ನಗುವು ಬರುವುದೇ. ಆ ಮುಂಡೇ ಗಂಡ ಹತ್ತು ತಲೆ ಹೊತ್ತುದಾದರೂ ನಿಜವೇ? ಅದನ್ನು ತೆಗೆದುಕೊಂಡು ಮಲಗುವುದು ಹೇಗೆ? ಮಲಗಿದರೆ ಶರೀರ ಮುಗುಚಲಿಕ್ಕಿಲ್ಲ. ಹೆಣ ಬಿದ್ದ ಹಾಗೆ ಬಿದ್ದಿರಬೇಕು. ಶೀತ ಆದರೆಂತು, ತೆನ್ನಾಲಿ ರಾಮಕೃಷ್ಣನು ಕಾಳಿಕಾಂಬೆಗೆ ಅಂದ ಹಾಗೆ— ಸಿಂಬಳ ತೆಗೆಯಲು ಬಲು ಪಜೀತಿ. ಆದರೂ ಚಿಂತೆ ಇಲ್ಲ. ಇಪ್ಪತ್ತು ಕೈಗಳಿವೆಯಂತೆ.

**ರಾಮು:**— ಹತ್ತು ತಲೆಯಿದ್ದರೆ, ಹತ್ತು ಬಾಯಿಗಳುಂಟು ಎಂದಾಯಿತು.

**ರಂಗ:**— ತಲೆಯಿಲ್ಲದವರಿಗೂ ಬಾಯಿಯಿರುತ್ತೆ.

**ರಾಮು:**—ಹಾಗಲ್ಲವೋ? ಹತ್ತು ಬಾಯಿಗಳಿಂದಲೂ ಅವನು ಉಣ್ಣುತ್ತಿದ್ದನೋ ಎಂದು. ಒಂದು ಹೊಟ್ಟೆಯಿರುವಾಗ ಹತ್ತು ಬಾಯಿಗಳಿಂದ ತಿನ್ನುವುದು ಏಕೆ? ಒಂದೇ ಬಾಯಿಯು ಸಾಕು.

**ರಂಗ:**— ಹೌದು ಹೌದು, ಜೋರಿನ ಹೆಂಗುಸು ಮನೆಯಲ್ಲಿದ್ದರೆ ಹತ್ತು ಬಾಯಿಗಳಿಗೆ ಒಂದು ಬಾಯಿ ಸಾಕು.

**ರಾಮು:**— ನಿನ್ನದು ಇಲ್ಲದ್ದೇ ಕುತಂತ್ರದ ಮಾತು.

**ರಂಗ:**— ಮತ್ತೆ ರಾವಣನಿಗೆ ಇಲ್ಲದ ಹತ್ತು ತಲೆ ಇತ್ತು ಅನ್ನುವಾಗ . . .

**ರಾಮು:**—ರಾವಣನಿಗೆ ಹತ್ತು ತಲೆ ಇದ್ದಿರಲಿಲ್ಲ ಎಂತಲೋ ನಿನ್ನ ಅಭಿಪ್ರಾಯ?

**ರಂಗ:**—ಬರೆದವನಿಗೆ ತಲೆ ಕಡಿಮೆಯಾದ್ದರಿಂದ, ತನ್ನಂತೆ ಅವನೂ ಕೆಡಬಾರದು ಎಂದು, ತನಗಿಲ್ಲದ ಒಂಭತ್ತು ತಲೆ ಅವನಿಗಿರಿಸಿದ.

**ರಾಮು:**—ನೀನು ಇದೇ ಅರ್ಥ ಹೇಳಿದರೆ, ನಿನ್ನ ಮನೆ ಜಗುಲಿಯ ಮುಂದೆ ಅಮ್ಮಗಳೊಂದೂ ರಾಮಾಯಣ ಕೇಳಲಿಕ್ಕೆ ಸುಳಿಯಲಿಕ್ಕಿಲ್ಲ.

**ರಂಗ:**—ಅವರು ಬರಲಿಲ್ಲವೆಂದು, ವಕೀಲರು ಕಕ್ಷಿಗಾರರನ್ನು ಕಾದು ಕುಳಿತ ಹಾಗೆ, ನಾನು ಕುಳಿತಿರುವುದೂ-ಇಲ್ಲ.

**ರಾಮು:**—ಹಾ! ನೀನು ವಕೀಲರು ಎನ್ನುವಾಗ ನೆನಪಾಯಿತು. ನನ್ನ ಆ ನಂಬ್ರ ಒಂದು ಗೋವಿಂದ ಆಯಿತು. ವಕೀಲ ಶ್ಯಾಮರಾಯನಿಗೆ ಇಷ್ಟು ರುಸುಂ ತಿನಿಸಿದ್ದು ವ್ಯರ್ಥವಾಯಿತು.

**ರಂಗ:**—ಅಯ್ಯೋ ಮರುಳೇ, ಶ್ಯಾಮರಾಯ ನಿನ್ನ ವಕೀಲನೇ! ಅವನಿಗಾದರೆ ರುಸುಮೇ ಬೇಕಂದಿದ್ದಿಲ್ಲ. ಒಳ್ಳೇ ಎರಡು ಡಜನು ಬಿಸ್ಕುಟು ಅಂಬೊಡೆ ಮಾಡಿ ತೆಗೆದುಕೊಂಡು ಹೋಗಿ ಕೊಟ್ಟದ್ದರೆ ನಿನ್ನ ಕೇಸು ವ್ಯವಹರಿಸುತ್ತಿದ್ದ. ಗುಣ, ಈಗ ಆಗುವಷ್ಟೇ ಆಗುತ್ತಿತ್ತು ಅನ್ನು.

**ರಾಮು:**—ಅದೇನು ಹಾಗೆ ಅನ್ನುತ್ತೀ?

**ರಂಗ:**—ಹಾಗೆನ್ನದೆ ಏನು? ಅವನಿಗೆ ಏನು ವಕಾಲತು ಉಂಟು ಎಂದು ತಿಳಿದಿದ್ದಿ? ಅವನು, ಈ ಆಳ್ವ, ಆ ಕಿಣಿ, . . ಇವಕ್ಕೆಲ್ಲ ವಕಾಲತು ಉಂಟು ಎಂದು ತಿಳಿದೆಯಾ? ನಿನಗೆ ಭ್ರಮೆ. ಮನೆಯಲ್ಲಿ ಸುಮ್ಮನೆ ಬಿದ್ದಿರಲಾರದ ಧೌಲಿಗೆ ಕೋರ್ಟಿಗೆ ಹೋಗಿ ಬಿದ್ದಿರುವುದು. ಮುನ್ಸಿಫರು ಎದ್ದರೂ ಇವರು ಕುರ್ಚಿ

ಬಿಡುವ ಹಾಗಿಲ್ಲ. ಮೂರನೆ ದಿನ ೧೦ ಘಂಟೆ ಆಗುವುದ ರೊಳಗೆ ಶಾಲೆ ಮಕ್ಕಳ ಹಾಗೆ ಇವರು ಹಾಜರು. ಬೇರೆ ವಕೀಲರು ಬಂದು ಇದ್ದ ಮೂರುವರೆ ಕುರ್ಚಿ ಭರತಿ ಮಾಡಿ ದರೆ ತಮಗೇನು ಗತಿ ಎಂಬ ಹೆದರಿಕೆ... ಹೌದೋ, ಈ ವಾರದ ಪೇಪರು ನಿನಗೆ ಬರಲಿಲ್ಲವೋ? ಒಂದಿಷ್ಟು ಸುದ್ದಿ ಹೇಳಿಬಿಡು. ಭಾರೀ ಮನುಷ್ಯ ಆದ ನಮ್ಮ ರಾಮಣ್ಣ, ಪೇಪರು ತರಿಸಿ ಓದುತ್ತಾನೆ ಅಂದ ಮೇಲೆ.

**ರಾಮು:**— ಪೇಪರು ತರಿಸುವುದು ಅಂದರೆ ನಾನೇನು ಹೇಳಿ, ಬರೆದು, ತರಿಸಿದ್ದಲ್ಲ. ಮಂಗಳೂರಿಗೆ ಹೋದಾಗ ನಮ್ಮ ಕಮ್ತಿ ವಕೀ ಲರು ಅಂದರು: 'ಇದೊಂದು ಪೇಪರು ಇರಲಿ ನಿಮಗೆ. ಊರಿನ ಸುದ್ದಿಯೆಲ್ಲ ಬರುತ್ತದೆ'—ಎಂದು. ಆಗಲಿ ಎಂದೆ. ಅವರ ಎದುರಿಗೆ 'ಇಲ್ಲ' ಅನ್ನಲಿಕ್ಕೆ ಬರುತ್ತದೆಯೇ? ಅಲ್ಲೇ ಒಣ ಧೌಲಿಗೆ ಮೂರು ರೂಪಾಯಿ ಜುಲುಮಾನೆ ತೆತ್ತು ಬಂದೆ. ಐದಾರು ತಿಂಗಳಾದುವು. ಬರುತ್ತಾ ಇದೆ. ಮುಂದಿನ ವರುಷ ಬೇಡ ಎನ್ನುವುದೇ ಸರಿ.

**ರಂಗ:**— ಇರಲಿ, ಯಾರಾರ ಮನೆ ಸುಟ್ಟಿತು; ಎಲ್ಲೆಲ್ಲಿ ಹೆಂಡತಿ ಗಂಡನಿಗೆ ಚೂರಿ ಹಾಕಿದಳು; ಯಾರಾರು ಕದ್ದು ಜೈಲಿಗೆ ಹೋದರು–ಎಂದು ಊರಿನ ಪುರಾಣವೆಲ್ಲ ಬರುತ್ತದೆ. ಕಸಬು ಇಲ್ಲದ ಒಬ್ಬ ನಾರದ ಮಂಗಳೂರಲ್ಲಿ ಕುಳಿತು ಸುದ್ದಿ ಜಮಾಯಿ ಸುತ್ತಿರುವಾಗ ನೀನು ಬಿಡಬೇಕೆ? ಈ ಸಾರಿ ಬರಲಿಲ್ಲವೋ— ಆ ವಜ್ರತೇಜವೋ, ಪಾಕವೋ ಅದರ ಸುದ್ದಿ. ಒಬ್ಬನು ಒಂದು ದಿನ ಅರ್ಧತೊಲೆ ತಿಂದರೆ ಮರುದಿನವೇ ಆನೆಯು ಹಾಗೆ ಆಗುತ್ತಾನಂತೆ. ನಿನ್ನ ಮಾತ್ಮಾಗಾಂಧಿಗೆ ಒಂದು ಸೇರು

ಕೊಡಿಸಿದರೆ ಒಂದು ಖಂಡಿಯಾದರೂ ತೂಕ ಹೆಚ್ಚೀತು . . . . ಆದಿರಲಿ, ನಿನ್ನ ಮಾತ್ಮಾಗಾಂಧಿ ಸುದ್ದಿಯೇನು? ಇನ್ನೂ ಜೈಲಿನ ಒಳಗೇ ಇದ್ದಾನೆಯೋ ನಿನ್ನ ಮಾತ್ಮಾ. . . ಅಥವಾ ಹೊಲೆಯರ ಗುಡಿಯಲ್ಲಿದ್ದಾನೆಯೋ!

**ರಾಮು:**— ಏನೋ ಅಪ್ಪ. ಇವತ್ತಿನ ಪೇಪರಿನಲ್ಲಿ "ಮಹಾತ್ಮಾ ಗಾಂಧಿಯವರು ಲಂಡನಿಗೆ ರೌಂಟೇ ಕಾನ್ಫೆರೃಗೆ ಹೋಗುವರು" ಎಂದಿದೆಯಪ್ಪ. ಎಲ್ಲಿ ಲಂಡನೋ, ಎಲ್ಲಿ ಗಾಂಧಿಯೋ! ಎಲ್ಲಿಂದೆಲ್ಲಿಗೆ ಹೋಗುವುದು! ಆದರೂ ಪುಣ್ಯಾತ್ಮನಪ್ಪ. ಬಲು ಕೀರ್ತಿಗೆ ಬಂದನು.

**ರಂಗ:**— ಕೀರ್ತಿಗೆ ನಮ್ಮ ಕಳ್ಳ ಬೊಗ್ಗು ಬರಲಿಲ್ಲವೇ? ನಾಳೆ ನೀನೂ ಬರಬಹುದು. ಹೌದೋ ರಾಮಣ್ಣ— ನಿನ್ನ ಮಾತ್ಮಾ ಗಾಂಧಿಯವರು ಲಂಡನಿಗೆ ಕಾಂಪ್ರೆಸ್ಸಿಗೆ ಹೋಗುವಾಗ ಒಂದಿಷ್ಟು ಹುಳಿಯನ್ನವನ್ನು ಮಾಡಿಸಿ ಕಳುಹಿಸಯ್ಯ. ಅಲ್ಲಿ ಬಿಳಿ ಮುಖದವರಿಗೆ ಆದನ್ನು ತಿನಿಸಿ, ಅವರು ಮರಳಾದರೆ, ಸ್ವರಾಜ್ಯ ಬರುವಾಗಲೇ ಗಾಂಧಿ ಮಾತ್ಮನಿಗೆ ಕೊಡಲಿಕ್ಕೂ ಸಾಕು. ಆ ಬಿಳಿ ಮಂಗಗಳು ಹುಳಿಯನ್ನ ಸ್ವಪ್ನದಲ್ಲಿ ತಿಂದಿರಲಿಕ್ಕಿಲ್ಲ.

**ರಾಮು:**— ಅದು ಹೌದಯ್ಯ. ಅವಕ್ಕೆ, ಹುಳಿಯನ್ನ ಈ ಪತ್ರೊಡೆ, ಹೋಳಿಗೆ ಎಂದರೆ ಭಾರಿ ಆಶ್ಚರ್ಯ ಕಾಣಲಿಕ್ಕೆ ಸಾಕು. ನಮ್ಮೂರಿಗೆ ಬಂದವ ಯಾರದು? "ಬೇತೆಟ್" ದೊರೆಯೋ? ಆವನಿಗೆ ಯಾರೋ ಎರಡು ಸುಕ್ಕಿನುಂಡೆ ಕೊಟ್ಟರಂತೆ. ಅವನಿಗೆ ಆವನ್ನು ಕಂಡು ಆಶ್ಚರ್ಯವಾಯಿತಂತೆ "ಇದು ಸಿಹಿ, ಇದು ಚೀಲದೊಳಗೆ ಹೇಗೆ ತುಂಬಿದ್ದಾರೆ" ಎಂದು ಕೇಳಿದನಂತೆ . . . ಹ್ಹ. ಹ್ಹ. ಹ್ಹ. ಹೌದೋ ರಂಗಣ್ಣ, ಈ ಬಿಳಿ ಜನಕ್ಕೆ ಬಾಲ

ಉಂಟೆಂಬುದು ನಿಜವೇನೋ . . . . . ಎಲ್ಲರೂ ಅನ್ನುತ್ತಾರಲ್ಲ.

**ರಂಗ:**—ಅದು ಖಂಡಿತ. ಕಿಷ್ಕಿಂಧೆಯ ರಾಮನ ಸೇನೆಯವರೇ ವಿಲಾಯತಿಗೆ ಹೋಗಿ ಕಾಲಾಂತರದಲ್ಲಿ ಬಿಳಿ ಜನ ಆದದ್ದಲ್ಲವೋ.

**ರಾಮ:**—ಹಾಗಾದರೆ ನಿಜಕ್ಕೂ ಅದು ಹೌದು. ನಾನು ಬರೀ ಕಟ್ಟುಕಥೆಯೆಂದೇ ತಿಳಿದಿದ್ದೆ. ಆದರೂ ಮಂಗಗಳ ಸಾಹಸ ಸಾಕು. (ದೂರದಿಂದ ಹಾಡೊಂದು ಕೇಳಿಸುವುದು.)

**ರಂಗ:**—ತಡಿ, ತಡಿ ಯಾರೋ ನಾರದರು ಬಂದ ಹಾಗೆ ಇದೆ . . . ಯಾರಣ್ಣ. ಏಕನಾದದ ಸ್ವರ! ದಾಸರೋ? ಒಂದು ವರುಷವಾಯಿತು. ಈ ಪುರಂದರ ದಾಸರ ಮೊಮ್ಮಕ್ಕಳು ನಮ್ಮ ಗ್ರಾಮಕ್ಕೆ ಬಾರದೆ. ಸುಮ್ಮನಿರು—ಏನು ಪದ ಅದು . . . .? "ಏನ ಬೇಡಲಿ ನಿನ್ನ ಬಳಿಗೆ ಬಂದು . . .?" ಮತ್ತೇನು ಬೇಡುವುದು? ಎರಡು ಪಾವು ಅಕ್ಕಿ. ಹೆಣ್ಣು ಮಕ್ಕಳಿದ್ದರೆ ಒಂದು ತೆಂಗಿನಕಾಯಿ, ಏನಾದರೂ ಹರಕು ಬಟ್ಟೆ—ಇಷ್ಟು ಜಾಸ್ತಿಯಾಗಿ. ಗಾಂಧಿ ಸ್ವರಾಜ್ಯ ನನಗೆ ಸಿಗಬೇಕು. ಈ ದಾಸರು ಎಂಬವರನ್ನೆಲ್ಲ ತುಪ್ಪದ ಕಡಾಯಿಯಲ್ಲಿ ಕಾಯಿಸಿ—ತುಪ್ಪ ಯಾವ ಮಣ್ಣಿಗೆ—ಎಣ್ಣೆ ಕಡಾಯಿಯಲ್ಲಿ ಕುದಿಸುತ್ತಿದ್ದೆ. . . . ಇವರಿಗೆ ಯಾರೂ ಯಜ್ಞೋಪವೀತ ಕೊಡುವವರಿಲ್ಲದೆ ಹೋಯಿತು. ಕೊಟ್ಟಿದ್ದರೆ ಬ್ರಾಹ್ಮಣರಾಗಿ ವೇದಮಂತ್ರ ಹೇಳುತ್ತಾ ಬರಲಿಕ್ಕೂ ಸಾಕು. ಹೌದು, ಬ್ರಾಹ್ಮಣರು ಸಾಗುವಳಿ ತೊಡಗಿದ ಮೇಲೆ ಇವರು ವೇದಪಾಠ ತೊಡಗಿದರೆ ಏನು ತಪ್ಪು? ಅರೇ . . . ಗಾನ ಬದಲು ಆಯಿತು. ಅದನ್ನೇ ಹೇಳಿದ್ದರೆ

ಚೆನ್ನಾಗಿತ್ತು. "ಏನ ಬೇಡಲಿ ನಿನ್ನ ಬಳಿಗೆ ಬಂದು"— ಅಂದಿದ್ದರೆ 'ದಮ್ಮಯ್ಯ ಏನೂ ಬೇಡ ಬೇಡ' ಅನ್ನುತ್ತಿದ್ದೆ. ಇದೇನು ಹಾಡು! "ಕಂಡುಕಂಡು ನೀಯೆನ್ನ ಕೈ ಬಿಡುವರೇ ರಂಗ . . ." ಹ್ಹ. ಹ್ಹ. ಈ ಕಂಡು[1] ರಂಗಣ್ಣನೇ ಕರೆಯುತ್ತಾ ಇದ್ದಾನೆ. ರಾಮಣ್ಣಾ, ಯಾರೆಂದು ಕಂಡು ಬಾ. ಬೇಗ . . ಬೇಗ . . . (ರಾಮಣ್ಣನು ನೋಡಲು ಹೋಗುವನು.)

"ಕಂಡು ಕಂಡು ನೀಯೆನ್ನ ಕೈ ಬಿಡುವರೇ ರಂಗ"—ಹೀಗೆ ಭಿಕ್ಷೆ ಬೇಡುವವರು ಹೆಚ್ಚಾದರೆ ಊರೊಳಗಿನ ರೈತರು. ಕೈಯ್ಯಿ ಕಾಲು ಒಟ್ಟಿಗೆ ಬಿಡುವುದೇ ಸರಿ. (ರಾಮಣ್ಣನು ನೋಡಿಕೊಂಡು ನಗುತ್ತ ಬರುವನು.)

ಯಾರು ಅದು? ಹೊಸ ದಾಸ! 'ಬೆಕ್ಕಿನ ಕೊಂದವರ್ಯಾರೋ' ಪೈಕಿ ಜನವೋ. ಅವು ಒಂದು ಸಾರಿ ಎದ್ದರೆ ಹಾತೆ ಎದ್ದ ಹಾಗೆ ಏಳುವುದುಂಟು.

**ರಾಮು:**—ಅಯ್ಯಯ್ಯೊ ರಂಗಣ್ಣ, ತಮಾಷೆಯೋ ತಮಾಷೆ . . ಅದು ನಮ್ಮ ಇವ. ಹೊಸ ರಂಗು ಶುರುಮಾಡಿಬಿಟ್ಟಿದ್ದಾನೆ. ಪಟ್ಟಾಗಿ ಮೂರು ನಾಮ ಬೇರೆ. ಶಂಖ, ಝಾಗಟೆ . . . ಯಾವ ದೇವರ ಗುಡಿಯಿಂದ ಕದ್ದನೋ . . . .

**ರಂಗ:**—ಯಾರು ಯಾರು?

**ರಾಮು:**—ನಮ್ಮ ಇವನಪ್ಪ ಇವನು. ಐತು . . . .

**ರಂಗ:**— ಐತು.

**ರಾಮು:**—ಆ ಸಾಲೇರವನಿಲ್ಲವೆ? ಅವ ಐತು . . . ಜೇಡರವ . . . ಅಲಾಬಿ ಸಮಯವೇ ಇದು?

1 ಕಂಡು — ತುಳುವಿನಲ್ಲಿ ಕಳ್ಳ ಎಂದರ್ಥ.

**ರಂಗ:**—ಯಾರು ಐತುವೇ? ಅಟ್ಟೆ ಕಾಲು ಐತುವೇ! ಛೇ ಅವನಿಗೆ ಈ ಸ್ವರ ಎಲ್ಲಿಂದ ಬಂದೀತು?

**ರಾಮು:**—ಅವನು ಜಾತಿ ಜೇಡರವನಲ್ಲ; ಸ್ವಲ್ಪ ಬೆರಿಕೆ ಬಾಬತ್ತು.

**ರಂಗ:**—ನಿಜಕ್ಕೂ ಅವನೇ ಹೌದೋ?

**ರಾಮು:**—ಹೌದಪ್ಪ.

**ರಂಗ:**—ಎಲ್ಲಿಗೆ ಹೊರಟ ಹಾಗಿದೆ?

**ರಾಮು:**—ಸವಾರಿ ಕಟ್ಟೆಗೇ ಬರುವ ಹಾಗೆ ಕಾಣುತ್ತದೆ.

**ರಂಗ:**—ಬರಲಿ, ಬರಲಿ. ಒಂದು ನಕಲಿ ಮಾಡುವ. ನಾನೆಂದು ದಕ್ಕೆ ನೀನು ಹೂಂಗುಟ್ಟುತ್ತಿರಬೇಕು.

(ಐತುವು ಬರುವನು. "ಕಂಡು ಕಂಡು ನೀಯೆನ್ನ" ಎಂಬ ಹಾಡನ್ನು ಹಾಡಿ ಮುಗಿಸಿ ಶಂಖ ಊದುವನು.)

**ಐತು:**—ಜಯವಾಗಲಿ, ಧನಿಯರೇ ಜಯವಾಗಲಿ!

**ರಂಗ:**—(ಅ) ಅದು ಬೇರೆ ಇದೆ. (ಪ್ರ) ಐತು ದಾಸರೇ, ಇನ್ನೊಂದು ಯಾವುದಾದರೂ ಕೀರ್ತನೆ ಹಾಡಿ. ನನಗೆ, ರಾಮಣ್ಣ, ನಮ್ಮ ಐತುವಿಗೆ ಇಷ್ಟೆಲ್ಲ ಕೀರ್ತನೆ ಬರುತ್ತದೆ ಅಂತ ತಿಳಿದಿರಲಿಲ್ಲ. ಅವನು ಬರಿಗೈಯಿಂದ ಭಿಕ್ಷೆ ಬೇಡಲಿಕ್ಕೆ ಬರುವುದನ್ನು ಕಂಡು ನನಗೆ ಸಿಟ್ಟಾಗುತ್ತಿತ್ತು. ನಿಜಕ್ಕೆ ಅನ್ನುತ್ತೇನಲ್ಲ: "ದಾಂಡಿಗ, ಸಿಗಿದರೆ ಆರು ಕೋಡಿ ಮೋಪು[1] ಆದಾನು. ಬೇಡಲಿಕ್ಕೇನು ದಾಡಿ" ಎಂದು ಕಾಣುತ್ತಿತ್ತು. ಈಗಾದರೋ ಇಷ್ಟಿಷ್ಟು ವ್ಯಥೆಯಿಲ್ಲ ನೋಡು. ಯಾಕೆಂದರೆ—ಬರಿದೆ ಬಂದು "ಅಯ್ಯ, ಪಡಿ[2]" ಅನ್ನುವುದಿಲ್ಲ. ಪಾವೋ, ಸೇರೋ, ಅಕ್ಕಿಯನ್ನು ಕೊಟ್ಟರೆ, ಬ್ರಾಹ್ಮಣರು ಅಮವಾಸೆ ದಿನ ಮನೆಗೆ ಬಂದು ತಿಂಗಳ ಪಂಚಾಂಗವನ್ನು ಓದಿ ತಿಳಿಸಿದ ಹಾಗೆ, ದೇವರ

1 ಮೋಪು–ನಾಟ. 2–ಭಿಕ್ಷೆ.

ನಾನು ಕೇಳಿಸುತ್ತಾನೆ ನೋಡು. ಅಂಥಾ ಪುಣ್ಯದ ಕೆಲಸವನ್ನು ಯಾರು ಮಾಡಬೇಕು ಈ ಕಲಿಯುಗದಲ್ಲಿ? ಯಾವಾಗ ಆ ಪುಣ್ಯಾತ್ಮ ಪುರಂದರದಾಸ ಪ್ರಾಣಬಿಟ್ಟನೋ, ಅವನೇನು ಪ್ರಾಣ ಬಿಡುತ್ತಾನೆ, ನಮ್ಮ ಅಜ್ಞಾನ, ಅಂತು ಯಾವಾಗ ಬಿಟ್ಟನೋ ಅವನ ಹಿಂದೆಯೇ ಹೋಯಿತು ಅವನ ಕೀರ್ತನೆ. ಏನೋ ಐತುವಂಥ ಪುಣ್ಯಾತ್ಮರು ಹುಟ್ಟಿ, ಅದನ್ನು ನಮ್ಮಂಥ ಪಾಪಿಷ್ಠರ ಕಿವಿಗೆ ಕೇಳಿಸುತ್ತಾರಲ್ಲ. ಅದೇ ದೊಡ್ಡ ಪುಣ್ಯ. ಪುಣ್ಯಾತ್ಮನಪ್ಪ ಐತು ದಾಸ!

**ಐತು:**— ನನ್ನದೇನು ಪಾಪಿ ಜನ್ಮ, ಗೈರ್ಯವಗತಿಯಿಲ್ಲದೆ ಮನೆ ಮನೆ ತಿರುಗುವುದು.

**ರಂಗ:**— ಹಾಗೆನ್ನಬೇಡ ಐತು, ಅನ್ನಬೇಡ. ಹೊಟ್ಟೆ ಹೊರೆಯುವ ಕೆಲಸ ಈ ಪ್ರಪಂಚದಲ್ಲಿ ದೊಡ್ಡದಲ್ಲ. ಒಂದು ನಾಯಿ ಮಾಡುತ್ತದೆ. ಆದರೆ ದೇವರ ನಾಮ ಹೇಳಿ ಭಿಕ್ಷೆ ಎತ್ತುವುದೆಂದರೆ ಸುಮ್ಮನೆ ಅಲ್ಲ. ಅದಕ್ಕೆ ಪಡೆದೇ ಬರಬೇಕು. ಎಷ್ಟೆಂದರೂ ನೀನು ಪುಣ್ಯಾತ್ಮ.

**ಐತು:**— ನನ್ನದೇನು ಸುಟ್ಟ ಪುಣ್ಯ ಸ್ವಾಮಿ. ಮಧ್ಯಾಹ್ನದ ವರೆಗೆ ತಿರುಗಿದರೆ, ಎರಡು ಪಾವು ಅಕ್ಕಿ ಸಿಗುವುದಿಲ್ಲ.

**ರಂಗ:**—ಅದು ಹಿಂದಾಯಿತು ಬಿಡು. ನಾನೇ ಅಂದೆನಲ್ಲ: ನನಗೆ ಕಂಡದ್ದನ್ನು. ಈಗಲಾದರೆ ದಾರಿ ಮೇಲೆ ಹೋಗುವವರು ನಿನ್ನ ಕಾಲಿಗೆ ಬಿದ್ದು ದೇವರ ನಾಮ ಕೇಳಿಕೊಂಡು ಹೋದಾರು. ಅಕ್ಕಿಯ ಮಾತು ಬಿಡು. ಭತ್ತ ಕುಟ್ಟಿದರೆ ಅಕ್ಕಿಯಾಗುತ್ತದೆ ಎಂದು ಚಿಕ್ಕ ಮಗುವಿಗೂ ಗೊತ್ತಿದ್ದ ಮಾತು. ಆದರೆ ದೇವರ ನಾಮ! . . . ಅಂತಹ ಪುರಂದರನಿಗೇ ಜೋಳಿಗೆ ತುಂಬದ ದಿನ

ಎಷ್ಟೋ ಇತ್ತಂತೆ! ಮೂಢ ಜನರು ದಾಸರ ಯೋಗ್ಯತೆ ಅವರಿಗೇನು ಗೊತ್ತು? ಪುಣ್ಯಾತ್ಮನಪ್ಪ . . .

**ಐತು:**— ಅಯ್ಯೋ ಬಿಡಿ ಅಂದರೆ.

**ರಾಮು:**—ಹಾಗಲ್ಲ ಐತುದಾಸ. ರಂಗಣ್ಣನ ವಿಚಾರ ನಿನಗೆ ಗೊತ್ತಿಲ್ಲ. ಅವನ ಮುಂದಿರುವುದೇನು ನೋಡು. ಸಾಕ್ಷಾತ್ ರಾಮಾಯಣ. ಹಗಲೂ ರಾತ್ರಿಯೂ ಅವನಿಗೆ ದೇವರ ಚಿಂತೆಯಲ್ಲದೆ ಬೇರೆ ಇಲ್ಲ. ನನ್ನಂಥವರು ಇಲ್ಲಿಗೆ ಬಂದು ಬಿದ್ದಿರುವುದು ಯಾವುದಕ್ಕೆ? ಏನಾದರೂ ರಾಮನಾಮ ಕಿವಿಗೆ ಬೀಳಲಿ! ಅದರಿಂದಲಾದರೂ ನಮ್ಮ ಜನ್ಮ ಪುನೀತ ಆಗಲಿ ಎಂದು ಈಗ ನಿನ್ನಂಥವರು ಮನೆ ಬಾಗಲಿಗೆ ಬಂದರೆ ಅವನ ಹೊಟ್ಟೆ ಎಷ್ಟು ತಂಪಾಗಲಿಕ್ಕಿಲ್ಲ . . ಹೆಚ್ಚೆಂದರೆ ಮುಖಸ್ತುತಿ ಮಾಡುತ್ತಾರೆ ಅನ್ನುವೆ... ಬೇಡ ಆ ಮಾತು . . . . ಇರಲಿ, ಒಂದು ದಾಸರ ಪದ ಅನ್ನು.

**ರಂಗ:**—ಅಯ್ಯೋ ಮರತೇ ಬಿಟ್ಟೆ. ಪಾಪಿ ಜನ್ಮ ಅನ್ನುವುದು ಅದಕ್ಕೆ. ಆ ಕಂಡ ಕಂಡು . . . ಅಲ್ಲ, ಅದೆಂಥದು ರಾಮಣ್ಣ ಆಗ ಬರುತ್ತಾ ದಾಸರು ಅಂದದ್ದು . . .

**ರಾಮು:**—ಹಾಡೇ. ನೆನಪು ಮಾಡುತ್ತೇನೆ . . . ಥೂತ್ ಮುಂಡೇದು ಗಂಟಲಲ್ಲಿದೆ, ಬಾಯಿಗೆ ಬರಲೊಲ್ಲದು.

**ಐತು:**—ಯಾವುದು? "ಏನ ಬೇಡಲಿ ನಿನ್ನ ಬಳಿಗೆ ಬಂದು"

**ರಂಗ:**—ಅದ್ದೇ. ಅದ್ದೇ—ಬೇಸರ ಇಲ್ಲದಿದ್ದರೆ ಅನ್ನುತ್ತೀರಾ?

**ಐತು:**—ನನಗೆಂಥ ಬೇಸರ! ತಾವು ಅಷ್ಟು ಕೇಳಲು ಆಸೆಪಡುವಾಗ ಹೇಳಲು ನನ್ನ ಗಂಟೇನು ಖರ್ಚು!

**ರಂಗ:**— ಆ ಪುರಂದರದಾಸರಿಗೂ ಹಾಗೆಯೇ ಅಂತೆ . . . ಹಾಡಿದಷ್ಟು ತೃಪ್ತಿಯಿದ್ದಿಲ್ಲವಂತೆ!

**ಐತು:**— ಅವರೆಲ್ಲಿ ನಾವೆಲ್ಲಿ?

**ರಂಗ:**—ಆದರೂ ಆಯಾಯ ಕಾಲಕ್ಕೆ ತಕ್ಕ ಹಾಗೆ ಇದ್ದೀರಲ್ಲ. ಇನ್ನೊಬ್ಬ ಇದ್ದಾನೆಯೇ? ನಮ್ಮ ಗ್ರಾಮದ ಮಟ್ಟಿಗೆ ನಾನೆನ್ನುವುದು? ಇದ್ದಾನೆಯೇ ರಾಮು . . .

**ರಾಮು:**— ನಮ್ಮೂರಲ್ಲಿ ಇದ್ದರೆ ಇನ್ನೇನು ಬರಗಾಲ.

**ಐತು:**— ಅನ್ನಲೇ.

**ರಂಗ:**— ಅನ್ನು ಅನ್ನು . . .

**ಐತು:**— "ಏನ ಬೇಡಲಿ ನಿನ್ನ ಬಳಿಗೆ ಬಂದೂ, ನೀನಿತ್ತ ಸೌಭಾಗ್ಯ ಅಖಿಲವಾಯ್ತೆನಗೆ" (ಎಂದು ಹಾಡುವನು.)

**ರಂಗ:**— ರಾಮು, ರಾಮು, ರಾಮು . . . . ನಿಜ ನಿಜ. ಈ ಸಂಸಾರ ದಲ್ಲಿ ಹೆಂಡತಿ ಮಕ್ಕಳು ಮರಿ ಎಂಬುದೆಲ್ಲ ಮಾಯೆ ಅಂದರೆ ಮಾಯೆ. ಅಂಥ ರಾಮನಿಗೇ ರಾಮಾಯಣದಲ್ಲಿ ಅರಣ್ಯ ವಾಯಿತು. ಹೀಗಿರುವಾಗ ಸುಮ್ಮನೆ ನಮ್ಮ ಮನೆ ನಮ್ಮ ಮಾರು ಎನ್ನುವುದು. ಜೇಡಿ ಬಣ್ಣದ ಹೆಂಡತಿ ತಂದು ತಾನು ಸುಖಿ ಅನ್ನುವುದು . . . .

**ಐತು:**— ಹೊತ್ತಾಯಿತು. ನಾನು ಹೋಗಲೇ? ಏನಾದರೂ ಅನು ಗ್ರಹಿಸಿದ್ದರೆ.

**ರಂಗ:**— ಇಷ್ಟು ಬೇಗನೇ! ನೀವಿರುವಾಗ ಸಮಯ ಹೋದ್ದೆಂಬುದು ಕಾಣಲೇ ಇಲ್ಲ.

**ರಾಮು:**—ಪಾಪ. ಹೋಗಲಿ ಬಿಡು. ನಮ್ಮ ಊರವನೆ ಅಲ್ಲವೇ? ಕರೆ ದಾಗ ಬರುವ ಇಷ್ಟು ದಿನ ಅವನಲ್ಲಿ ಇಂಥ ಸಂಪತ್ತಿತ್ತು ಅಂದು ತಿಳಿದಿಲ್ಲ. ಈಗೇನು–ನಮ್ಮವನೇ ಆದ. ಹೋಗಲಿ ಬಿಡು . . . ಸೇರೋ ಸೇರುವರೆಯೋ ಅಕ್ಕಿ ಹಾಕಿ ಕಳುಹಿಸಿಕೊಡು . . . .

**ರಂಗ:**— ಆಯಿತು; ಅವನಿಗೂ ನಾಲ್ಕು ಮನೆ ತಿರುಗಿ ಬರುವಾಗ ಮಧ್ಯಾಹ್ನ ಆಗುತ್ತದೆ.

**ರಾಮು:**— ಉಳಿದವರು ಯಾರು ಇಷ್ಟು ಹೊತ್ತು ಅವನನ್ನು ಕುಡಿಸಿ ಕೊಳ್ಳುತ್ತಾರೆ ರಂಗಣ್ಣ? ನಿನಗೆ ಮರುಳು. ನಿನಗೆ ದೇವರ ನಾಮ ಅಂದರೆ ಅಷ್ಟಿದೆ ಅಂತ ಉಳಿದವರು ಯಾರಿಗೆ ದೇವರು ಬೇಕು?

**ರಂಗ:**— ನಿಲ್ಲು ಐತು. ಛೇ ಐತ್ತು ಎಂತಲೇ ಬರುತ್ತದೆ. ಸಿಟ್ಟು ಮಾಡಬೇಡಿ ದಾಸರೇ! ಹಿಂದಿನ ನೆನಪು.

**ಐತು:**— ನಾನು ನಿಮ್ಮ ಪಾಲಿಗೆ ಯಾವಾಗಲೂ ಐತುವೇ, ಬಿಡಿ.

**ರಂಗ:**— (ಒಳಗೆ ಹೋಗಿ ಬಂದು) ಒಟ್ಟು ಮೋಸ ಆಯಿತು. ಅವಳು ಉಗ್ರಾಣದ ಕೋಣೆಗೆ ಬೀಗ ಹಾಕಿ ಕೆರೆಗೆ ಹೋಗಿದ್ದಾಳೆ. ಬೆಳತಿಗೆ, ಬೆಳತಿಗೆ ಬಿಟ್ಟು, ಕುಚ್ಚಲು ಅಕ್ಕಿ ಸಹ ಕೋಣೆಯ ಒಳಗೇ ಇದೆ. ರಾಮಣ್ಣ, ಸೊಂಟದಲ್ಲೆಲ್ಲಾದರೂ ಒಂದಾಣೆ ಕಾಸಿದ್ದರೆ ತೆಗೆ, ಮತ್ತೆ ಕೊಡುತ್ತೇನೆ.

**ರಾಮು:**— (ಕೈಹಾಕಿ ನೋಡಿ) ನೋಡುತ್ತೇನೆ! (ಹುಡುಕಿ) ಅರೇ ಎಲ್ಲಿ ಹೋಯಿತು! ಎರಡಾಣೆ ನಿಕ್ಕಲ್ ಪಾವಲಿ ಒಂದನ್ನು ಹೊಗೆ ಸೊಪ್ಪಿಗೆ ಬೇಕು ಎಂತ ಸಿಕ್ಕಿಸಿಕೊಂಡಿದ್ದೆ. ಎಲ್ಲಿ ಬಿದ್ದು ಹೋಯಿತು? ಕೆರೆ ಹತ್ತಿರ ನಿಂತಿದ್ದೆ . . . . ಛೇ . . . . ಹೋಗಿ ನೋಡಿಕೊಂಡು ಬರುತ್ತೇನೆ.

**ಐತು:**— ಬೇಡ ಸ್ವಾಮಿ, ಇನ್ನೊಂದು ಸಾರಿ ಬರುತ್ತೇನೆ. ಮುಖ್ಯ ಅಷ್ಟು ಪ್ರೇಮವಿದ್ದರಾಯಿತು.

**ರಂಗ:**— ಛೇ, ಈಗ ಬರಿಗೈಯಲ್ಲಿ ಕಳುಹಿಸುವುದಾಯಿತಲ್ಲ. ಇರಲಿ ದಾಸರೇ, ತಿರುಗಾಡಿಕೊಂಡು ಬನ್ನಿ. ಬಾರದೇ ಇರಬೇಡಿರಿ.

ಮನೆಯವಳಿಗೂ ಎರಡು ದಾಸರ ಹಾಡು ಕೇಳಿಸುವ ಎಂದಿದೆ. ಅವಳಿಗಂತು ಈ ಸಂಸಾರದ ಮೋಹ ಜನ್ಮಕ್ಕೆ ಬಿಡುವ ಹಾಗಿಲ್ಲ.

**ಐತು:**— ಆಯಿತು. ಅಪ್ಪಣೆಯಾಗಲಿ . . .

**ರಾಮು:**— ರಂಗಣ್ಣ, ಒಂದು ಕ್ಷಣದ ಮಾತಿಗೆ ಕೆರೆಯ ವರೆಗೆ ಹೋಗಿ ನೋಡಿಕೊಂಡು ಬರಲೇ!

**ಐತು:**— ನನಗಾಗಿ ಬೇಡ

**ರಾಮು:**— ಯಾರಿಗಾದರೂ ಸರಿಯೆ. ಎರಡಾಣೆ ಕಾಸು! ದಾಸರ ಕೈಗೆ ಬಿದ್ದರೆ ನನ್ನ ಹೊಗೆಸೊಪ್ಪಿಗೆ ಹಾಳಾದುದಕ್ಕಿಂತಲೂ ಹೆಚ್ಚಿನ ಪುಣ್ಯ ಅಲ್ಲವೆ!

**ರಂಗ:**— ಉಂಟೇ. (ಐತು ತೆರಳುವನು. ಅಪಹಾಸ್ಯಕ್ಕೆ ತನ್ನೊಂದು ಕವಿತೆ ಹಾಡುವನು.)

ಏನಕೊಡಲ್ಯೆ ನಾನು ನಿನಗೆ ಇಂದು ||
ನೀ ಹೊಡೆದ ಬೊಬ್ಬೆ ಬಲುವಾಯ್ತು ಕಿವಿಗೆ || ಪ ||
ಅಕ್ಕಿಯಾ ಕೊಡುವೆನೆ ಉಗ್ರಾಣದೊಳಗಿಲ್ಲ ।
ರೊಕ್ಕವಾ ಕೊಡುವೆನೆ ಮನಸೆ ಇಲ್ಲ ।
ಬಟ್ಟೆಯಾ ಕೊಡುವೆನೆ ಹರಕಾದ್ದು ಒಳಗಿಲ್ಲ ||
ರಟ್ಟೆ ಮುರಿಯುತೆ ದುಡಿಯೊ ಐತುದಾಸ ||

ರಾಮಣ್ಣ, (ಯಕ್ಷಗಾನದ ಅರ್ಥಗಾರಿಕೆಯ ರೀತಿಯಿಂದ) ನಿನಗೂ ಮಿದುಳು ಎಂಬ ಪದಾರ್ಥ ತಲೆಯೆಂಬ ಘಟದಲ್ಲಿ ಉಂಟೆಂದಾಯಿತು. ಇರಲಿ, ನಿಜಕ್ಕೂ ದುಡ್ಡು ಕಳೆದುಹೋದುದು ಹೌದೊ!

**ರಾಮು:**— ನಿನಗೆ ಮರುಳೋ, ರಂಗಣ್ಣ! ಎರಡಾಣೆ ಸುದ್ದಿ ಹೇಳಿದರೆ ಆ ಮುಂಡೇಗಂಡನ ಕಿವಿ ಹೇಗಾಗುತ್ತದೆ ನೋಡುವ ಎಂತ ನುಡಿದೆ. ನಿಜಕ್ಕೂ ನಂಬಿಯೇ ಇದ್ದಾನೆ ಮಗ. ನೀನೂ

ಸುಮಾರು ಮಾಡಿದೆ. ಒಳಕ್ಕೆ ಹೋದುದನ್ನು ನೋಡಿ, ಏನಾದರೂ ಅಕ್ಕಿಪಕ್ಕಿ ತರುತ್ತೀಯೋ ಎಂದು ಯೋಚಿಸಿದೆ. ಅಲ್ಲದಿದ್ದರೆ ಆಗ ಎಂದ ಹಾಗೆ—"ಏನೂ ಬೇಡಬೇಡ ನನ್ನ ಬಳಿಗೆ ಬಂದು" ಅನ್ನುತ್ತೀಯೋ ಎಂದು ಇದ್ದೆ . . . . . . ಎರಡೂ ಮಾಡದೆ, ನಮ್ಮ ಮುನ್ಸೀಫರ ಹಾಗೆ ವಾಯಿದೆ ಮುಂದರಿಸಿಬಿಟ್ಟೆ.

**ರಂಗ:**—ಒಮ್ಮೆಗೇ, ನಮ್ಮ ಗುಟ್ಟು ಅವನಿಗೆ ಸಿಗಬಾರದು. ನಾಲ್ಕು ಮಂದಿಯ ಮುಂದೆ ಚೆನ್ನಾಗಿ ಹೊಗಳಿದರೆ, ಅವನಿಗೂ ತಾನೊಬ್ಬ ಪುರಂದರನ ಮೊಮ್ಮಗ ಎಂದು ತಲೆಗೆ ಹೋಗುತ್ತದೆ. ಆ ಮೇಲೆ ಒಮ್ಮೆಗೇ ಅಟ್ಟದಿಂದ ಇಳಿಸಿದರಾಯಿತು. ಅಲ್ಲದಿದ್ದರೆ ಏನು ಸೊಕ್ಕಿದು? "ಏನ ಬೇಡಲಿ ನಿನ್ನ ಬಳಿಗೆ ಬಂದು?"—ಬೇಡುತ್ತಾನೆ ಮಗ—ದಾಸರ ಸೋಗುಹಾಕಿ, ಜೋಳಿಗೆ ಹಿಡಿದು, ಮೂರು ನಾಮ ಜಡಿದು, ಜಾಗಟೆ ಬಿಗಿದು, ಶಂಖ ನೆಗೆದು ಪೂಮಾಡಿದರೆ-ತಾನೊಬ್ಬ ದಾಸ ಆಗುತ್ತೇನೆಂತ ತಿಳಿದಿದ್ದಾನೆ! ಐತುದಾಸ! ಹ ಹ್ಹ ಹ್ಹ, ಜೇಡರವನಿಗೆ ಇಷ್ಟು ಸೊಕ್ಕಾಯಿತಲ್ಲ! ದೇವರ ನಾಮುವನ್ನು ಇವನಿಗೆ ಹೇಳುವ ಧೈರ್ಯಬಂದಿತಲ್ಲ; ಅದೂ ನಮ್ಮಂತಹ ಬ್ರಾಹ್ಮಣರ ಮನೆಗೆ ಬಂದು. ಪರ ಊರೇ? ಅದೂ ಅಲ್ಲ. ಊರ ಮನೆಯೋ! ಇವನು ಅಂಗವಸ್ತ್ರ ಉಡುವ ಮುಂಚೆಯೇ ಇವನನ್ನು ಕಂಡವರು ನಾವು!

ಮುಖ್ಯ ಇದು ಅವನ ತಪ್ಪಲ್ಲ. ನಾಲ್ಕು ಕಾಸಿನ ಆಸೆಗೆ ಛಾಪಖಾನೆ ಇರಿಸಿ, ಪುರಂದರದಾಸನ ಹಾಡನ್ನು, ಮಿಶೆನೆರಿಗಳು ಯೇಸು ಬೂಕುಗಳನ್ನು ಕಾಸು ಆರುಕಾಸಿಗೆ ಮಾರುವ ಹಾಗೆ, ಮಾರುತ್ತಾರಲ್ಲ, ಅಂಥವರ ತಪ್ಪು.

**ರಾಮು:**— ರಂಗಣ್ಣ, ನೀನು ದಾಸರ ಪದಕ್ಕೇ ಇಷ್ಟು ಸಿಟ್ಟಾದೆ. ಈಗ ಅಲ್ಲಿ ಲ್ಲೋ ಅಂತೆ ವೇದವನ್ನು ಪ್ರಿಂಟುಮಾಡಿದ್ದಾರಂತೆ. ಅರ್ಥ ಸಹಿತ!

**ರಂಗ:**— ವೇದ ಮಾಡುತ್ತಾರಲ್ಲ. ತಲೆಬುರುಡೆ! ಯಾರಾದರೂ ಒಬ್ಬ ಅ ಆ ಇ ಈ ಎಂದು ನಾಲ್ಕು ಶ್ಲೋಕ ಹೇಳಿರಬೇಕು. ಅದನ್ನು ಬರೆದು ಛಾಪಿಸಿರಬೇಕು. ನಿಜವಾದ ವೇದ ಇವರಿಗೆಲ್ಲಿಂದ ಸಿಕ್ಕೀತು? ಸಿಕ್ಕಿದರೂ ಅರ್ಥಮಾಡುವ ಯೋಗ್ಯತೆ ಈ ಕಲಿಯುಗದಲ್ಲಿ ಯಾರಿಗಿದೆ? ಇವರೆಲ್ಲರು ವೇದವನ್ನು ಕದ್ದರೆ ಈಗ ಮತ್ಸ್ಯಾವತಾರ ಆಗುವುದಿಲ್ಲವೋ? ಆದರೂ ಧೈರ್ಯ ನೋಡಿ— ಐತುದಾಸ!

(ಊರಿನ ಶ್ಯಾನುಭಾಗ ವೆಂಕಟ್ರಾಯರು ಬರುವರು.)

ಅರೆ! ನಮ್ಮ ವೆಂಕಟ್ರಾಯ ಬಂದುಬಿಟ್ಟನಲ್ಲ. ಒಂದು ಆಟ ಆಡಿಬಿಡೋಣವೇ?

**ರಾಮು:**— ಮೂರೇ ಜನವಾಯಿತಲ್ಲ. ಆಟ ಎಂಥಾದ್ದು ಮಣ್ಣು. ನೀನು ಬಾಯಿತೆರೆದರೆ ಸಮಯ ಎನ್ನುವುದು ಕಣ್ಮುಚ್ಚಿ ತೆರೆಯುವುದರೊಳಗೆ ಹೋಗುತ್ತದೆ. ಬನ್ನಿ, ಶ್ಯಾನುಭಾಗರೇ, ಬನ್ನಿ . . .

**ರಂಗ:**— ನಾನು, ನೀನು ಇವತ್ತು ಬರಲಿಕ್ಕಿಲ್ಲ ಎಂದು ತಿಳಿದಿದ್ದೆ. ಊರವರೆಲ್ಲಾ ಗದ್ದೆಕೆಸರಿನಲ್ಲಿ ಬಿದ್ದು ಉರುಳಾಡುತ್ತಿರುವಾಗ. . .

**ಶ್ಯಾನು:**— ನಾನು ಬಾರದೆ ಇರುವುದೆಂದರೇನು? ಜಮಾಬಂದಿಯನ್ನಾದರೂ ತಪ್ಪಿಸಿಯೇನು; ಇಲ್ಲಿ ಬಾರದೆ ನಿಲ್ಲಲಿಕ್ಕಿಲ್ಲ. ರಂಗಣ್ಣಯ್ಯನ ಮಾತು ಅಂದರೆ ಜೇನು ತಿಂದಹಾಗೆ.

**ರಾಮು:**— ಜೇನು ಕುಡಿಯುವುದೋ, ತಿನ್ನುವುದೋ?

**ರಂಗ:**— ಸ್ವಲ್ಪ ಗಟ್ಟಿ ಜೇನು ಎಂದು ತಿಳಿದುಕೋ.

**ಶ್ಯಾನು:**— ನಮ್ಮ ರಾಮಣ್ಣನೂ, ರಂಗಣ್ಣನ ಒಟ್ಟಿಗೆ ಸೇರಿ ಚೆನ್ನಾಗಿ ಮಾತು ಕಲಿತ. ಅದೇ ಸಂಸರ್ಗ ಅನ್ನುವಂಥಾದ್ದು.

**ರಂಗ:**— ಅದಿರಲಿ ವೆಂಕಟ್ರಾಯ, ನಿನಗೆ ಮಾತ್ರ ಯಾಕೆ ಈ ಸಂಸರ್ಗ ದೋಷ ತಟ್ಟುವುದಿಲ್ಲ?

**ಶ್ಯಾನು:**— ಹಾಗೆ ಎಲ್ಲವರೂ ಹಾಸ್ಯಗಾರರಾಗಲು ಬಂದೀತೆ? ನಿನಗೇನೋ ಆ ಶಾರದಾಂಬೆ ನಾಲಿಗೆಯ ಮೇಲೆ ನಾಲ್ಕು ಗೀಟು ಒತ್ತಿ ಬರೆದಳು — ಎಂದು

**ರಂಗ:**— ನನ್ನ ಸಂಸರ್ಗ ದೋಷ ನಿನಗೆ ಬರಲಿಲ್ಲ ಎಂದಲ್ಲ ನಾನೆಂದದ್ದು. ನಿನ್ನ ತಹಶಿಲ್ದಾರರದ್ದು . . .

**ಶ್ಯಾನು:**— ಅವರದ್ದೇನು ನನಗೆ ಬರಬೇಕು?

**ರಂಗ:**— ಅವರ ಹಿಂದೆ ತುಪ್ಪದ ತಂಬಿಗೆ ಹಿಡಿದು ಸುತ್ತಿದ್ದಕ್ಕೆ ಅವರು ಡೊಳ್ಳಿನಲ್ಲಿ ಅರ್ಧವಾದರೂ ನಿನಗೆ ಬರಬಹುದಿತ್ತಲ್ಲ?

**ಶ್ಯಾನು:**— ಡೊಳ್ಳು ಸುಮ್ಮನೆ ಬರುವುದಿಲ್ಲ. ಅದು ಶ್ರೀಮಂತಿಕೆ, ಸುಖದ ಲಕ್ಷಣ.

**ರಂಗ:**— ಓಹೋ ಹಾಗಿದೆಯೋ? ನಾನು ತಿಳಿದೆ — ಅದು ಜಡ್ಡು ತುಪ್ಪದ ಮಹಾಪ್ರಸಾದ ಎಂದು. ಆದರೂ ನಿಮ್ಮ ತಹಶಿಲ್ದಾರ ಎಂದರೆ ಒಂದು ವಿನಾಯಕನೇ. ನಾಳೆ ಚೌತಿಗೆ ಅವನಿಗೇ ಒಂದು ಸೊಂಡಿಲು ಅಂಟಿಸಿ ಕುಡ್ರಿಸಿದರಾಯಿತು.

**ಶ್ಯಾನು:**— ನಿನ್ನ ತಮಾಷೆಯೇ! ನಿನ್ನ ಬಾಯಿಯೊಳಗೆ ಯಾರು ಬದುಕಲಿಕ್ಕೂ ಸಾಧ್ಯವಿಲ್ಲ.

**ರಂಗ:**— ಬಾಯಿಯಲ್ಲಿ ಬದುಕಲಿಕ್ಕೆ ಅದೇನು ಹಟ್ಟಿಕೊಟ್ಟಿಗೆಯೆ? ಹೆಗ್ಗಣದ ಬಿಲವೇ?

**ಶ್ಯಾನು:**— ಮಾತಿಗೆ ಮಾತುಂಟಪ್ಪ ನಿನ್ನ ಹತ್ತಿರ. ಬಲ್ಲವರ ಕಥೆ
ಯೇ ಹಾಗೆ. ಅದಿರಲಿ, ರಂಗಣ್ಣ, ನೀನು ಕೊನೆಗೆ ಕಲೆಕ್ಟರರ
ಹತ್ತಿರ ಆ ದರ್ಕಾಸ್ತಿನ ವಿಷಯದಲ್ಲಿ ಮಾತನಾಡಬೇಕೆಂದಿ
ಯಲ್ಲ. ಮಾತನಾಡಿದೆಯಾ? ಒಂದು ಅರ್ಜಿಯನ್ನಾದರೂ
ಕಳುಹಿಸಬಹುದಿತ್ತಲ್ಲ . . .

**ರಂಗ:**— ಥೂತ್, ಆ ಮುಂಡೇಗಂಡನ ಹತ್ತಿರ ನಾನು ಮಾತನಾಡು
ವುದೋ? ಯಾವ ಸುಟ್ಟ ಜಾತಿಯೋ ಏನೋ. ಇಲ್ಲಿಂದಲೇ
ಒಂದು ಕಾಗದ ಗೀಚಿಬಿಟ್ಟೆ. ಇನ್ನು ನಿನ್ನ ತುಪ್ಪದ ತಹಶಿಲ್ದಾ
ರರು, ಕೋಳಿ ಮಣೆಗಾರರು, ಎಲ್ಲ ಪ್ರಸನ್ನರಾಗಿ ಅದು ನಿನ್ನ
ಹತ್ತಿರ ಬಂದು, ನೀನು ನಿನ್ನ ವರದ ಹಸ್ತ ಅದರ ಮೇಲಿರಿಸಿದರೆ,
ಒಂದು ಗೇಣು ನೆಲವನ್ನು ನನ್ನ ಹಣೆಯ ಮೇಲೆ ಬ್ರಹ್ಮ ಬರೆ
ದಿದ್ದಾನೆಂತ ನಂಬಬಹುದು.

**ಶ್ಯಾನು:**— ರಂಗಣ್ಣ, ನಿನ್ನ ವಿಷಯದಲ್ಲಿ ನಾನು ಈ ವರೆಗೆ ತಕ್ರಾರು
ಮಾಡಿದ್ದುಂಟೇ? ಕಳೆದ ವರುಷ ನಿನಗಾಗಿ ನಾನು ಅಳತೆಗೆ
ಅಳತೆಯನ್ನೇ ಹಾರಿಸಲಿಲ್ಲವೇ?

**ರಂಗ:**— ಅದೇನೋ ನಿಜ.

**ರಾಮು:**— ಆದರೆ ರಂಗಣ್ಣ, ನಾನು ಕೇಳಿದ ಒಂದು ತುಂಡು ಜಾಗಕ್ಕೆ
ಮಾತ್ರ "ಇದು ಗೋಚರಾವು" ಎಂದು ಬರೆದು ಬಿಟ್ಟ.

**ಶ್ಯಾನು:**— ತಹಶಿಲ್ದಾರರೇ ಹಾಗೆ ಹೇಳಿ ಬರೆಯಿಸಿದ್ದು ಮಹಾರಾಯ.

**ರಾಮು:**— ತಹಶಿಲ್ದಾರರ ಬಾಯಿಗೆ ಮಣ್ಣು.

**ರಂಗ:**— ಬಿದ್ದದ್ದೀಗ ನಿನ್ನ ಬಾಯಿಗೆ. ಅವರ ಬಾಯಿಗೆ ಜಡ್ಡು
ತುಪ್ಪವನ್ನು. ವೆಂಕಟ್ರಾಯು, ಆ ಫಕೀರ ಗೌಡನ ಗಡಿ ನಂಬ್ರು
ಏನಾಯಿತು? ಆ ಓಣಿ ಯಾರಿಗೆಂದಾಯಿತು?

**ಶ್ಯಾನು:**— ನನಗೇನು? ನಾನು ಅದು ಮಾಮೂಲು ರಸ್ತೆ ಎಂದು ಬರೆದು ಹಾಕುತ್ತೇನೆ. ಫಕೀರನಿಗೂ ಬೇಡ, ಅವನ ಅಜ್ಜ ತಿಮ್ಮರಸನಿಗೂ ಬೇಡ.

**ರಂಗ:**— ಶಹಭಾಸ್, ಹಾಗೆ ಮಾಡಬೇಕು. ಇಬ್ಬರು ಮುಂಡೇ ಗಂಡರೂ ಮಣ್ಣು ತಿನ್ನಲಿ. ಇನ್ನು ಅಂಥಾ ಹಟ ಹಿಡಿದರೆ ನೂರು ನೂರು ರೂಪಾಯಿ ಇಳಿಸಬೇಕೆನ್ನು. ಸೂರೇನು? ಇನ್ನೂರೇ ಅನ್ನು. ಕೊಡಲಿ ಮಕ್ಕಳು.

**ರಾಮು:**— ಅಷ್ಟೆಲ್ಲ ಎಲ್ಲಿಂದ ಕೊಟ್ಟಾರು?

**ರಂಗ:**— ಅದಕ್ಕೇ ಅಂದುದು ನಾನು-ಒಬ್ಬನು ದಿವಾಳಿಯಾಗಿ ಆರು ತಿಂಗಳಾಯಿತು; ಇನ್ನೊಬ್ಬ ದಿವಾಳಿಯಾಗಲಿಕ್ಕೆ ಮೂರು ತಿಂಗಳು ಉಳಿಯಿತು. ಇನ್ನು ಒಂದು ವರುಷ ಹೋದರೆ ಇಬ್ಬರೂ ಐತುದಾಸರ ಉಪದೇಶ ಪಡೆಯುವುದೇ; ಏನೂ ತೊಂದರೆಯಿಲ್ಲ.

**ಶ್ಯಾನು:**— ಐತುದಾಸರೆಂದರೆ ಯಾರು? ನಮ್ಮ ಮಣೇಗಾರ ಕಿಸ್ತುದಾಸರಿಗೆ ಏನಾದರೂ ಆಗಬೇಕೇ?

**ರಂಗ:**— ಕಿಸ್ತುದಾಸರಂತಲೋ ನಿನ್ನ ಮಣೆಗಾರನ ಹೆಸರು. ನಾನು ಕೋಳಿದಾಸ ಎಂದು ಇರಿಸಿದ್ದೆ. ಏನು ಕಿಸ್ತುದಾಸ? ಮಾರ್ಚಿ ಕಿಸ್ತೋ? ಎಪ್ರಿಲು ಕಿಸ್ತೋ? ಮೇ ಕಿಸ್ತೋ?

**ಶ್ಯಾನು:**— ಕ್ರಿಸ್ತದಾಸರೆಂದು ಇರುವುದು.

**ರಂಗ:**— ಹೋ ಹೋ. ಕ್ರಿಸ್ತ ಹೋಗಿ ಕಿಸ್ತು ಆದದ್ದೋ. ಅವರು ಪಾದ್ರಿಮತದವರೋ. ನನಗೆ ಗೊತ್ತೇ ಇರಲಿಲ್ಲ. ನಾನು— ಯಾವುದೋ ಆ ಜಾತಿ ಈ ಜಾತಿ ಇದ್ದದ್ದು ಕೊನೆಗೆ ಆ ಸಮಾಜಿ ಈ ಸಮಾಜಿ ಅಂತಾಗಿ, ಕಿಸ್ತುದಾಸ ಆದದ್ದು ಎಂದು ತಿಳಿದೆ.

ಇದು ಹಾಗೆಲ್ಲ ಅಲ್ಲ ಕ್ರಿಸ್ತುದಾಸರು. ನಿನಗೆ ನಾನು ಅನ್ನು ತ್ತೇನೆ: ಈ ಕಿಸ್ತುದಾಸರ ಕುಟುಂಬಕ್ಕೆ ಹದಿನಾಲ್ಕು ಜನ್ಮಕ್ಕೂ ಮೋಕ್ಷ ಸಿಗದು. ಎಲ್ಲಿಲ್ಲದ ಯೇಸುವನ್ನು ನಂಬಿ ನಮ್ಮ ರಾಮಕೃಷ್ಣ ಪರಮೇಶ್ವರರಂಥ ದೇವರನ್ನು ಮರೆತರಲ್ಲ, ಇವ ರಿಗೆ ಅಲ್ಲಿ ಯಮನ ಮನೆಯಲ್ಲಿ ಎಣ್ಣೆ ಕಡಾಯಿಯಲ್ಲಿ ಕಾಯಿಸಿ, ಗರಗಸದಲ್ಲಿ ಸಿಗಸಿ, ಕಲ್ಲಿನಲ್ಲಿ ಕಡೆದು, ಬಿಸಿಲಿನಲ್ಲಿ ಒಣಗಿಸು ವುದಿಲ್ಲ ಎಂದು ತಿಳಿದಿಯೋ? ನಿಜಕ್ಕೂ ಅನ್ನುತ್ತೇನೆ— ಈ ಸಾಹೇಬರು, ಕಿಂಸ್ತಾಮರು ಇವರಿಗೆ ಎಲ್ಲಾ ನರಕವೇ ವಿನಹ ಸ್ವರ್ಗ ಸಿಗುವುದು ಹೇಗೋ ಅಪ್ಪ. ನಾನಾದರೆ ಕೊಡ ಲಿಕ್ಕಿಲ್ಲ.

**ರಾಮು:**— ಹೌದೋ ರಂಗಣ್ಣ. ಅವರೆಲ್ಲ ಹಿಂದಿನ ಜನ್ಮದಲ್ಲಿ ಹಿರ ಣ್ಯಕಶಿಪು ಸಂತತಿಯವರಂತೆ ಹೌದೇನೋ? ಜಯವಿಜಯರಿಗೆ ಮೂರು ರಾಕ್ಷಸ ಜನ್ಮ ಆದರೂ ದುರ್ಬುದ್ಧಿ ಹೋಗದೆ, ದೇವರ ಮೇಲಿನ ವೈರ ಹೋಗದೆ, ಈಗ ಅವರು ಸಾವಿರಾರು ಜನರಾಗಿ, ಸಾವಿರಾರು ಜನ್ಮದಲ್ಲಿ, ಹೀಗೆ ದೇವರ ವೈರ ಸಾಧಿಸುತ್ತಾರಂತೆ. ನಿಜವಿರಲೂಬಹುದು ಯಾರೋ ಹೇಳಿದ ಕಥೆ.

**ರಂಗ:**— ಯಾರು ಅಂದರೇನು? ನಾನೇ ಹೇಳಿದ್ದಲ್ಲವೇ? ನಿನ್ನ ನೆನಪು ಅಂದರೆ ನೆನಪು. ನಾನು ಹೇಳಿದ ವಿಷಯವಾದ ಮೇಲೆ ಅದಕ್ಕೆ "ಹೌದೊ?" ಎಂದು ಕೇಳಬೇಕೇ? ನಾನಿಷ್ಟೆಲ್ಲಾ ರಾಮಾಯಣ ಗೀಮಾಯಣ ಓದುವುದು ಏಕೆ?

**ರಾಮು:**— ನನಗೆ ಮರವೆ ಹೆಚ್ಚು.

**ಶ್ಯಾನು:**— ಈಗ ಹಾಗೊಂದು ಕಥೆಯಿದೆಯೆ? ನಮ್ಮ ಕ್ರಿಸ್ತು ದಾಸರು ಅಲ್ಲಲ್ಲಿ ಹಳ್ಳಿಗೆ ಹೋಗಿ, ಮಹಗಾರಿಕೆ ಜತೆಯಲ್ಲಿ

ಊರಿನ ಕಥೆ ಪಾಡ್ದನ ಎಲ್ಲ ಸಂಗ್ರಹಿಸುತ್ತಿದ್ದಾರೆ. ಇದನ್ನೂ ಒಂದು ಹೇಳಿ ಬಿಡಲೇ!

**ರಾಮು:**— ಹೇಳಿ ಬಿಡು; ಹೇಳಿ ಬಿಡು. ಕೋಳಿದಾಸ ಬರೆದು ಕೊಳ್ಳಲಿ.

**ರಂಗ:**— ವೆಂಕಟ್ರಾಯ್ರು, ಅವನಿಗೆ ಊರಿನ ಕತೆಗಿತೆಯೆಲ್ಲ ಯಾಕಂತೆ? ಸುಮ್ಮನೆ ತನ್ನ ರಿಕಾರ್ಡಿಷ್ಟು ಕಂಡು ಬಿದ್ದಿರಲಿಕ್ಕೆ ಆಗುವುದಿಲ್ಲವೇ? ಮೊದಲೇ ಅವನಲ್ಲಿ ಅರ್ಜೆಂಟಿಗೆ ಆರು ತಿಂಗಳ ವಾಯಿದೆ ಆಗಿದೆ. ಇನ್ನೇನಿಲ್ಲ ಈ ವರುಷ ಹಾಕಿದ ಅರ್ಜಿಗೆ ಮುಂದಿನ ವರುಷವೇ ಉತ್ತರ.

**ಶ್ಯಾನು:**— ಏನೋ ತಮ್ಮ ದೊರೆಗಳು, ಅವನ್ನೆಲ್ಲ ಒಟ್ಟುಮಾಡಿ ಛಾಪೆಮಾಡುತ್ತಾರಂತೆ.

**ರಾಮು:**— ಈಗ ವೇದಗೀದ ಎಲ್ಲ ಛಾಪೆಮಾಡಿ ಮುಗಿಯಿತು. ಇದೂ ಛಾಪೆ ಆಗಬೇಕೇ? ನಮ್ಮ ರಂಗಣ್ಣಯ್ಯ ಹೇಳಿದುದು ಮೊದಲು ಛಾಪೆಯಾಗಲಿ.

**ರಂಗ:**— ನನ್ನ ಕಥೆಯನ್ನು ಜೀವಹೋದರೆ ಛಾಪೆಮಾಡಲಿಕ್ಕಿಲ್ಲ. ಮಾಡಿದರೆ ಬುಡಕ್ಕೇ ನೀರು ಬರುತ್ತದೆ. ಶ್ಯಾನುಭಾಗರೇ, ಮಣೆಗಾರನೆಂದು ನಮ್ಮ ಊರಿನ ಕಥೆ ಪಾಡ್ದನಗಳನ್ನೆಲ್ಲ[1] ಅವನಿಗೆ ಕೊಡಿಸಬೇಡಿ.

**ಶ್ಯಾನು:**— ನನ್ನ ಹತ್ತಿರ ಹೇಳನೆ ಅವರಾಗಿ ಸಿಕ್ಕಿದವರನ್ನು ಕೇಳುತ್ತಾರೆ.

**ರಂಗ:**— ಹೇಳುವ ಮುಂಡೇಗಂಡರಿಗೆ ಕಣ್ಣುಸನ್ನೆ ಮಾಡಬಾರದೇ?

**ಶ್ಯಾನು:**— ಎಲ್ಲರೂ ಕೇಳುತ್ತಾರೆಂಬುದೇನು ನಿಶ್ಚಯ?

---

1 ತುಳುವಿನ ಪದ್ಯಕಾವ್ಯ.

**ರಾಮು:**— ಅದು ಹೌದಪ್ಪ. ಮೊನ್ನೆ ಆ ಶ್ರೀಧರ ಭಟ್ಟ — ಕಲಿಟ್ರು ಬಂದ್ರು ಅಂತ "ಹೀಂಗೆ ಬನ್ನಿ ಸ್ವಾಮಿ. ಇಲ್ಲಿಯುವರೆಗೂ ತಾಂವು ಚಿತ್ತೈಸಬಹುದು" ಎಂದು ಬೊಗಳಿದನಲ್ಲ. ಹಿಂದು ಮುಂದಿನ ವಿಚಾರಮಾಡಿದನೇ ಅವನು? ತಸ್ತೀಕು ನಾಲ್ಕು ತಾಸು ಹೆಚ್ಚಾದರೆ, ತಿಂದುಕೊಂಡು ಕುಳಿತೇನು ಎಂತ ಯೋಚನೆ ಮಾಡಿದನೇ ವಿನಹ, ದೇವರ ಗುಡಿ, ಆ ಸುಟ್ಟ ಮುಸುಡಿನವನ ಕಾಲು ತಾಗಿದರೆ ಭ್ರಷ್ಟ ಆದೀತು, ಎಂತ ಇಷ್ಟಿಷ್ಟಾದರೂ ಯೋಚನೆ ಮಾಡಿದನೇ?

**ರಂಗ:**— ಯಾರು? ಶ್ರೀಧರ ಭಟ್ಟ ಅಷ್ಟು ಮಾಡಿದನೇ? ನೀನು ನನಗೊಂದು ಸುದ್ದಿಯನ್ನು ತಿಳಿಸಲಿಲ್ಲವೇಕೆ? ಅವನನ್ನು ಊರಿಂದ ಹೊರಗೆ ಓಡಿಸುತ್ತಿದ್ದೆನಲ್ಲ.

**ರಾಮು:**— ನಿನಗೆ ಗೊತ್ತಾಗದೆ ಇರಲಿಕ್ಕಿಲ್ಲ ಅಂತ ತಿಳಿದಿದ್ದೆ.

**ಶ್ಯಾನು:**— ರಾಮಣ್ಣ, ಸುಳ್ಳು ಸುಳ್ಳು ಹೇಳಬೇಡ. ನಾನಿದ್ದೆನಲ್ಲ ಆ ದಿನ ದೊರೆಗಳ ಸಂಗಡ.

**ರಂಗ:**— ನಿನ್ನ ದೊರೆಯನ್ನೂ ಬಲ್ಲೆ. ಕಬ್ಬಿನ ಹಿತ್ತಿಲ ದರೆ[1] ಯನ್ನೂ ಬಲ್ಲೆ.

**ಶ್ಯಾನು:**— ನಿಜಕ್ಕೂ ರಂಗಣ್ಣ, ಶ್ರೀಧರ ಹಾಗೇನು ಅಂದವನಲ್ಲ. ದೊರೆಗಳು ಅಲ್ಲೇ ದೇವಸ್ಥಾನದ ಹತ್ತಿರ ಹಾದುಹೋಗುತ್ತಿದ್ದರು. ಅಲ್ಲೇ ಗುಡಿಯ ಮುರುಕು ಮಾಡನ್ನು ಕಂಡು ನಿಂತರು. ಶ್ರೀಧರ ಭಟ್ಟ ಬಂದಿದ್ದನಷ್ಟೆ. "ಇದೇನು, ಮಾಡು ದುರಸ್ತಿ ಮಾಡಿಸಲಿಲ್ಲ. ನಿಮಗೆ ದೇವರು ಬೇಡವೆ?" ಅಂದರು. ಆದಕ್ಕೆ ಇವನು — "ಏನೋ ಸ್ವಾಮಿ, ಬಡದೇವರು, ತಸದೀಕು

1 ಮಣ್ಣಿನ ಬೇಲಿ.

ಸರಿಯಾಗಿ ಬರುವುದಿಲ್ಲ” ಅಂದ. ಅಷ್ಟೆ, ಅವರು ಅಷ್ಟಕ್ಕೇ ಹೊರಟುಹೋದರು.

**ರಂಗ:**— ಏನು? 'ನಿಮಗೇನು ದೇವರು ಬೇಡವೇ' ಅಂದನೆ? ಅದಕ್ಕೆ ಇವನೇನೆಂದ? 'ಬಡದೇವರು'— ಅಂದನೆ! ಸರಿಯಾಯಿತು. 'ದೇವರು ಬೇಡವೇ' ಅನ್ನಲಿಕ್ಕೆ ಅವನಿಗೆಷ್ಟು ಧೈರ್ಯ? 'ಬಡದೇವರು' ಅನ್ನಲಿಕ್ಕೆ ಇವನದೆಷ್ಟು ಧೈರ್ಯ. ದೇವರ ವಿಷಯ ಈ ಕರಿಮುಸುಡಿನವನಿಗೆ ಏನು ಗೊತ್ತಂತೆ? ಎಲ್ಲಿ ನಾಯುಮಾರ್‍ರವನೋ[1] ಏನೋ. ಇವನು ಅದಕ್ಕೆ ದೇವರು ಬಡವ ಅನ್ನುತ್ತಾನೆ. ತನ್ನಹಾಗೆ ದೇವರಿಗೆ ಠಿಕಾಣಿಯಿಲ್ಲ ಎಂದು ತಿಳಿದಿರಬೇಕು ಮಗ. ದೇವರಿಗೆ ಮೊದಲು ೪೦೦ ರೂಪಾಯಿ ತಸದೀಕು ಇದ್ದಿತ್ತು. ಅವರು ಇವರು ಎಂದು ಎಲ್ಲಾ ತಿಂದುಹಾಕಿದರು. ಈಗ ಈ ಶ್ರೀಧರ ಭಟ್ಟ ಅಲ್ಲಿ ಒಂದು ಸೌಟು ಎಣ್ಣೆಯನ್ನೂ ಇರಿಸುವುದಿಲ್ಲ. ಪೂಜೆ ಮುಗಿಯಿತೆಂದರೆ ದೇವರ ಮುಂದಿನ ದೀಪ ನೊಂದಿಸಿ, ಬತ್ತಿ ಹಿಂಡಿ ಉಳಿದ ಎಣ್ಣೆ ಮನೆಗೆ ತರುತ್ತಾನೆ ಮಗ.

**ರಾಮು:**— ಏನೇನು! ಮೊದಲು ಈ ದೇವರಿಗೆ ೪೦೦ ರೂಪಾಯಿ ತಸದೀಕು ಇತ್ತೇ?

**ಶ್ಯಾನು:**— ಹೌದಪ್ಪ, ಇನ್ನೂ ಅದು ಬಾಕಿಯಲ್ಲೇ ಇದೆ. ೫ ವರುಷದಿಂದ ಅಲ್ಲೇ ಅಮಾನತಿನಲ್ಲಿದೆ. ದೇವಸ್ಥಾನ ದುರಸ್ತಿ ಮಾಡಿದರೆ ಕೊಡುತ್ತಾರಂತೆ.

**ರಂಗ:**— ಕೊಡುವ ಮನಸ್ಸಿದ್ದರೆ ಇವರೇ ಏಕೆ ದುರಸ್ತಿ ಮಾಡಿಸಬಾರದು? ಎಲ್ಲೆಲ್ಲಿನ ಹೊಲೆಯರ ಶಾಲೆಯ ದುರಸ್ತಿಗೆ,

1 ಮಲಬಾರಿನ ನಾಯರ್ ಜನರಿಗೆ ನಂಜಿನಿಂದ ಕರೆಯುವ ಹೆಸರು.

ಮದ್ರಾಸಿನಿಂದಲೇ ಇಂಜಿನಿಯರು ಬಂದು, ಒಂದಕ್ಕೆ ನಾಲ್ಕು ಭತ್ತೆ ತಿಂದುಕೊಂಡು ಹೋಗುತ್ತಾರಲ್ಲ. ಊರಿನ ಒಂದೇ ಒಂದು ದೇವರ ಗುಡಿ ದುರಸ್ತಿಮಾಡಬಾರದೇನು? ೫ ವರುಷಕ್ಕೆ ಆಯಿತೆಷ್ಟು? ೨,೦೦೦. ಬಡ್ಡಿ ಸ್ವಾಹಾ! ೨,೦೦೦ ರೂಪಾಯಿ ಹಾಕಿದರೆ ಈ ಮುಂಡೇಗಂಡರಿಗೆ ದೇವಸ್ಥಾನ ರಿಪೇರಿ ಮಾಡಿಸಲಿಕ್ಕೆ ಬರುವುದಿಲ್ಲವೊ! ಇದು ನಾನು ಅನ್ನುತ್ತೇನೆ—ದೇವರ ದುಡ್ಡು ತಿನ್ನಲಿಕ್ಕೆ ಉಪಾಯ ನಮ್ಮ ವಿಷ್ಣುಮೂರ್ತಿ ದುಡ್ಡು ತಿಂದವರು ಇವತ್ತಿನ ವರೆಗೆ ಉದ್ಧಾರವಾದ್ದಿಲ್ಲ. ಬರೇ ಎಣ್ಣೆ ಕದ್ದೇ ಶ್ರೀಧರನ ಅವಸ್ಥೆ ಇಷ್ಟಾಯಿತು. ನಾಲ್ಕು ಜನ ಮೊಕ್ತೇಶ್ವರರು ಇದ್ದರು. ಮೂರುಜನ ಪಾಪ್ರಿ(Pauper) ಯಾಗಿ ಸತ್ತರು. ಇನ್ನೊಬ್ಬನ ಹೊಟ್ಟೆಯಲ್ಲಿ ಒಂದು ಗಂಡು ಹುಳುವೂ ಹುಟ್ಟಲಿಲ್ಲ. ಇನ್ನು ಇವರು ಬರಕತ್ತು[1] ಆಗುವುದುಂಟೇ?

**ರಾಮು:**—ಶ್ಯಾನುಭಾಗರೇ, ನೀವು ಹೇಳಿ ಸಂಗತಿಯನ್ನೆಲ್ಲ, ನಿಮ್ಮ ದರೆಗಳಿಗೆ. ಸುಮ್ಮನೆ ಯಾರಾದರೂ ಕೆಡಬಾರದು.

**ರಂಗ:**—ಈ ತಾರಕ್ಕೆ ಮೂರರ ಶ್ಯಾನುಭಾಗನ ಮಾತನ್ನು ಅವನೆಲ್ಲಿ ಕೇಳುತ್ತಾನೆ? ಅವನು ನಂಬುವುದಿರಲಿ; ಆ ತುಪ್ಪದ ತಹಶಿಲ್ದಾರ, ಈ ಕೋಳಿ ಮಣೆಗಾರರು ನಂಬುತ್ತಾರೇನು?

**ಶ್ಯಾನು:**—ಅದು ನಿಜ ರಂಗಣ್ಣ, ತಮ್ಮ ಲಾಭಕ್ಕಾಗಿ, ಸರಕಾರದ ಲಾಭಕ್ಕೆ, ಏನಾದರೂ ಇದ್ದರೆ ನಂಬುತ್ತಾರೆಯೋ ವಿನಹ, ನಾಲ್ಕು ಕಾಸು ಬಿಚ್ಚುವ ಏರ್ಪಾಡಿಗೆ ಅವರ ಕಿವಿ ಸ್ವಲ್ಪ ದೂರವೇ!

---

1 ಉದ್ಧಾರ.

**ರಾಮು:**— ನಮ್ಮ ತಾಲೂಕುಬೋರ್ಡು ಪ್ರೆಸಿಡೆಂಟರ ಹಾಗೆ.

**ರಂಗ:**— ಯಾರು, ಪ್ರೆಸಿಡೆಂಟ ಸೋಮಯ್ಯನೆ? ಹೌದೋ ಶ್ಯಾನು ಭಾಗ, ಈ ಸಾರಿ ಓಟು ಮೆಂಬರಿಯೆಲ್ಲಾ ಏನಾಯ್ತು? ನಾನು ಮನೆ ಬಿಡಲಿಲ್ಲ. ಅದರ ಬದಲು ರಾಮಾಯಣ ಇಷ್ಟು ಓದಿದರೆ ಫಲವುಂಟು. ಈಗ ಯಾರೆಲ್ಲ ಮೆಂಬರರು? ನಮ್ಮೂರಿನಿಂದ ಯಾರು? ಅವರ ಪ್ರೆಸಿಡೆಂಟ ಯಾರು? ಸೋಮಪ್ಪನೇ ಏನು?

**ಶ್ಯಾನು:**— ಪ್ರೆಸಿಡೆಂಟ್ ಸೋಮಪ್ಪನಲ್ಲದೆ ಇನ್ನು ಯಾರು? ಅವ ನಂತಹ ಮಾತುಭಾರ ಯಾರಿದ್ದಾನಂತೆ? ಇನ್ನು ಈ ಊರಿನ ಮೆಂಬರಿ ವಕೀಲ ನಾರ್ಣಪ್ಪಯ್ಯನಿಗಾಯಿತು.

**ರಂಗ:**— ಈ ವಕೀಲರಿಗೆ ಬರೇ ರುಸುಂ, ಕಮಿಶನ್ ಇಷ್ಟು ಸಾಲದೆ ತಾಲೂಕು ಬೋರ್ಡಿನ ಭತ್ತೆಯೂ ಬೇಕಾಯಿತೆ?

**ರಾಮು:** ನೀನೇ ಅಂದೆಯಲ್ಲ, ಈಗ ಅವಕ್ಕೆ ಕಾಸಿನ ಸಂಪಾದನೆ ಯಿಲ್ಲವೆಂದು.

**ರಂಗ:**— ಅದು ಯಾರಿಗೆಂದದ್ದು? ಆ ಆಳ್ವ, ಕಿಣಿ, ಶ್ಯಾಮರಾಯ— ಇವರಂಥವರಿಗೆ. ಇವನಿಗೇನು ಧಾಡಿ? ಸುಳ್ಳು ಸುಳ್ಳು ನಂ ಬರ ಹಿಡಿದು ತಿಂಗಳಿಗೆ ೨೦೦–೩೦೦ ರೂಪಾಯಿ ಮಾಡುತ್ತಾನೆ ಕಕ್ಷಿಗಾರರ ಮನೆಯಲ್ಲಿ ಹಲಸು ಸಾಗುವಾನಿ ಮರವಿದ್ದರೆಲ್ಲ ಇವನ ಮನೆಗೆ ಬೇಕು. ಒಳ್ಳೇ ನಾಲ್ಕು ಕೆಸುವಿನ ಸೊಪ್ಪು ಆಗಲಿಕ್ಕಿಲ್ಲ, ಇವನ ಕಣ್ಣು ತಾಗಿತೇ! ಅವನ ಅಪ್ಪ ಯಾರಾರ ತಲೆಹೊಡೆದು ಮಾಡಿದ ಆಸ್ತಿಗೂ ಬರಗಾಲವಿಲ್ಲ. ಮೇಲೆ, ಈ ಬೋರ್ಡಿನ ಭತ್ತೆ.

**ಶ್ಯಾನು:**— ಆ ಊರಿನವರಿಗೆ ಭತ್ತೆ ಸಿಗುವುದಿಲ್ಲವಂತೆ. ಅಲ್ಲೇ ಅಲ್ಲವೆ ಮೀಟಿಂಗು ಆಗುವುದು.

**ರಂಗ:**— ನಿನಗೇನು ಗೊತ್ತು? ಒಂದು ಮೆಂಬರಿ ಇದ್ದರೆ ಎಷ್ಟೆಲ್ಲ ನಮೂನೆಯಿಂದ ಕಾಸುಮಾಡಬಹುದು ಎಂದು. ನಿನ್ನ ಕೈಯಲ್ಲಿ 'ಕ್ರಾಸ್ಟಾಫು ಸಂಕಲೆ' (Cross-staff and Chain) ಇದ್ದ ಹಾಗೆ ಅದು. ಅಲ್ಲಿ ಮಾಸ್ತರರನ್ನು ಹೆದರಿಸಿದ, ಇಲ್ಲಿ ಕಂತ್ರಾಟರನ್ನು ಹೆದರಿಸಿದ; ಸಿಕ್ಕಿದನ್ನೆಲ್ಲಾ ಒಳಗೆ ಹಾಕಿದ. ಮೊದಲೇ ಸೋಮಯ್ಯನ ಪ್ರೆಸಿಡೆಂಟ. ಒಂದು ಕೋಣಸಿಗಾದರೂ ತಲೆಯಿದ್ದೀತು; ಇವನಿಗೆ ತಲೆಬಿಟ್ಟು, ಖಾಲಿ ತಲೆಬುರುಡೆ ಸಹ ಇಲ್ಲ. ಅವನಿಗೂ ಒಂದು ದೆಸೆ. ಮಾತುಭಾರ—ಎಂದನು ಶ್ಯಾನಾಭಾಗ. ಕೋರ್ಟಿಗೆ ಹೋದರೂ ಅವನ ಮಾತು ಮಾತುಭಾರವೇ? ಎಷ್ಟು ಸುಳ್ಳುಸಾಕ್ಷಿ ಹೇಳಿದರೂ ಹಿಡಿಯುತ್ತದೆ. 'ಎಷ್ಟು ತೀರ್ವೆ'? ಎನ್ನುತ್ತಾರೆ ಮುನಸೀಫ. '೧೫೦೦' ಅಂದರಾಯಿತಲ್ಲ. ಹರಿಶ್ಚಂದ್ರನ ಮಗನೇ ಎಂದು ಆಗುತ್ತದೆ. ಇತ್ತಲಾಗಿ, ಶಾಲಾ ಮಾಸ್ತರರಿಗೆ ಸಂಬಳ ಕೊಡುವಾಗಲೇ, ಮೋಟಾರಿನ ಏಜೆಂಟರು ಡಿಸ್ಕೌಂಟು ಪಡೆದ ಹಾಗೆ ರೂಪಾಯಿಗೆ ಆಣೆಯೋ ಎರಡಾಣೆಯೋ ತಿಂದೇ ಸಂಬಳ ಕೊಟ್ಟರಾಯಿತು. ಏ ಸೋಮಯ್ಯ, ನಿನ್ನ ಅದೃಷ್ಟವೇ! ಉಳಿದವರ ಮೆಂಬರಿಕೆಗೆ ತಲೆತಲೆ ಒಡೆಯುವ ವರೆಗೆ ಜಗಳ ಆಗುತ್ತೆ; ಇವನನ್ನು ಎದುರಿಸುವ ಜನರೇ ಇಲ್ಲ.

**ರಾಮು:**— ಮಾತುಭಾರನಾದ ಮೇಲೆ ಹಾಗೇ ಸರಿಯಷ್ಟೆ.

**ರಂಗ:**— ಮಾತೂ ಭಾರ, ಅವನಂತಹರಿದ್ದರೆ ಭೂಮಿಗೂ ಭಾರ. ಏನಿಲ್ಲ, ನೇಗಿಲು ನೋಗ ಹಿಡಿದು ಗದ್ದೆ ಉಳುತಿದ್ದ ಮಗ, ಈಗ ಪ್ರಸಿಡೆಂಟ. ಇವನಿಗೆ ಯಾಕೆ ಪ್ರಸಿಡೆಂಟಕೆ? ಅದು ಹೋದ ಮಾರಣೇ ದಿನವೇ ಇವನು ಬರಬೇಕು ಗೊಬ್ಬರ

ಹೊರಲಿಕ್ಕೆ. ಈ ಮೆಂಬರಿ, ಪ್ರಸಿಡೆಂಟ ಎಲ್ಲ, ಕೆಲಸ ಇಲ್ಲದ ಉಂಡಾಡಿಗಳಿಗೇ ವಿನಹ, ನ್ಯಾಯವಾದ ಮನೆಬದುಕು ಇರುವ ನಮ್ಮ ನಿಮ್ಮಂಥವರಿಗಲ್ಲ! ಒಂದೊಂದು ಈ ಸರಕಾರದವರು ಸ್ವರಾಜ್ಯ ಅಂತ ತೆಗೆಯುತ್ತಾರೆ, ಹೇಳುವುದಲ್ಲ. ಇನ್ನು ಈ ಗಾಂಧಿ ಮಹಾತ್ಮನ ಸ್ವರಾಜ್ಯದಲ್ಲಿ ಹೇಗೆಲ್ಲಾ ಉಂಟೋ. ನಮ್ಮ ಸೋಮಪ್ಪ, ನಾರ್ಣಪ್ಪ ಎಲ್ಲ ಈಗಲೇ ಕೌಂಸಿಲು ಮೆಂಬರಿಗೆ ಅರ್ಜಿಹಾಕಿ ಇರಿಸಿರಲಿಕ್ಕೂ ಸಾಕು. ಸ್ವರಾಜ್ಯ ಇವರಿಗೆಲ್ಲ! ಮನೆಹೆಂಡತಿ ಹೆದರಿಸಲಿಕ್ಕೆ ಬಾರದವರಿಗೆಲ್ಲ ಸ್ವರಾಜ್ಯ. ಸ್ವರಾಜ್ಯ ಬಂದರೆ ಅಲ್ಲಿ ಇಲ್ಲಿ ತಿನ್ನಲಿಕ್ಕೆ ಸಿಗುತ್ತದೆ ಎಂದು ಈ ಜನ ಬೊಬ್ಬೆ ಹೊಡೆಯುವುದು. ಅಷ್ಟು ನಮ್ಮ ಫರಂಗಿ ಅರಸನಿಗೆ ಗೊತ್ತಿಲ್ಲವೇ?

**ಶ್ಯಾನು:**— ಹೊತ್ತಾಯಿತು, ಹೋಗಿ ಬರಲೇ ರಂಗಣ್ಣ?

**ರಂಗ:**— ಏನು ಶ್ಯಾನುಭೋಗಿಕೆ ಉಂಟೋ ಎಂದು ಕೇಳಲಿಕ್ಕೆ ನೀನೇ ಶ್ಯಾನುಭಾಗ. ದಂಡು ಕಡಿಯಲಿಕ್ಕೆ ಉಂಟೋ ಎಂದು ಕೇಳಬೇಕಾಯಿತು.

**ಶ್ಯಾನು:**— ಹಾಗಲ್ಲ, ಸ್ವಲ್ಪ ತರಾತುರಿಯ ಕೆಲಸವಿದೆ.

**ರಾಮು:**— ನಮ್ಮ ವೆಂಕಟ್ರಾಯರ ಕೆಲಸ ಎಲ್ಲ ತರಾತುರಿ ಕೆಲಸವೇ. ಚಿಲ್ಲರೆಪಲ್ಲರೆ ಕೆಲಸ ಅಂತಲೇ ಇಲ್ಲ.

**ಶ್ಯಾನು:**— ಹಾಗಲ್ಲ, ಮಣೆಗಾರರು ಬೆಳಿಗ್ಗೆ ಬಂದು ತಮ್ಮನ್ನು ಬಂಗಲೆಯಲ್ಲಿ ಕಾಣಬೇಕು ಅಂದಿದ್ದಾರೆ.

**ರಂಗ:**— ಮನೆಗಾರನ ಮನೆ ಹಾಳಾಯಿತು, ತಹಶಿಲ್ದಾರನ ತೊಗಲು ತಿಂದುಹೋಯಿತು. ಹೌದೊ ವೆಂಕಟ್ರಾಯರೇ, ಆ ಮಣೆಗಾರನು ಬಂಗ್ಲೆ ಬಾಡಿಗೆಯನ್ನಾದರೂ ಕೊಡುತ್ತಾನೆಯೋ, ಇಲ್ಲವೆ ಅದೂ ನಿನಗೇ ಕ್ಷೌರವೋ?

**ಶ್ಯಾನು**:— ಅವನೆಲ್ಲಿಂದ ಕೊಡುತ್ತಾನೆ? ವಾಚರನಿ(Watcher)ಗೆ ಕಾಸು ಮೂರು ಕಾಸು ನಾನೇ ಕೊಡಬೇಕು. ಆಯಿತು; ಹೋಗಿ ಬರಲೇ. ಎಂತಹ ಕೆಲಸ ಇದ್ದರೂ ರಂಗಣ್ಣನ ಕಟ್ಟೆ ಕಾಣದೆ ಇರಬಾರದು ಎಂದು ಬಂದೆ. ಇಲ್ಲಿ ಬಂದರೆ ಪ್ರಪಂಚವೇ ಮರೆತುಹೋಗುತ್ತದೆ. ಮಾತಿಗೆಂಥ ವರ ಪಡೆದು ಬಂದಿದ್ದಾನೋ ನಮ್ಮ ರಂಗಣ್ಣ. ಬಾಯಿ ತೆರೆದರೆ ಹಾಸ್ಯವೇ ಬರುವುದು. ಹಾಳಾದ ಹೊಟ್ಟೆಯೊಂದಿಲ್ಲದಿದ್ದರೆ ಇಲ್ಲೇ ಬಿಡಾರವನ್ನು ಮಾಡುತ್ತಿದ್ದೆ. ಆಗಲಿ, ಹೊತ್ತಾಯ್ತು......ಹೋಗಲೇ.

**ರಂಗ**:— ಹೇಗೂ ಹೋಗುತ್ತಿ. ನಿಮ್ಮ ಕಿಸ್ತು ದಾಸನಿಗೆ ಅನ್ನು: ನನ್ನ ದರಕಾಸ್ತಿನ ವಿಚಾರ. ಕೇಳದಿದ್ದರೆ ಹೇಳು—ನಮ್ಮ ರಂಗಣ್ಣಯ್ಯನ ಹತ್ತಿರ ಕತೆಪಾಡ್ದನ ಬಂಡಿಗಟ್ಟಲೆ ಇದೆ ಎಂದು.

**ರಾಮು**:— ನೀನೇ ಈಗಿಷ್ಟು ಬೈದು ಅವನಿಗೆ ಕಥೆಹೇಳಿ ಕೊಡುತ್ತೀಯಾ?

**ರಂಗ**:— ಬರಲಿ ಆ ಕೋಳಿ ಸರದಾರ. ಅವನಿಗೆ ನಾನೇ ಹೊಸ ಪುರಾಣ ತಯಾರು ಮಾಡಿಕೊಡುತ್ತೇನೆ. ನಂಬಿಕೊಂಡೇ ಹೋಗಬೇಕು. (ವೆಂಕಟ್ರಾಯನು ತೆರಳುತ್ತಾನೆ) ಅರೇ! ಮಾತು ಮುಗಿಯುವುದರೊಳಗೆ ಶ್ಯಾನುಭಾಗನು ಹೋಗಿಯಾಯಿತು. ಪ್ರಾಯಶಃ ಬೆಳಿಗ್ಗೆ ಯಾರದ್ದಾದರೂ ಗಡಿಕಲ್ಲು ಕಿತ್ತುಹಾಕಲಿಕ್ಕೆ ಮಳೆಬಂದಿತು ಎಂದು ನಮ್ಮ ಮನೆಗೆ ಬಂದ. ಕೈಗೆ ಮೇಣ ತಾಗಿಸದೆ, ಮಾತನಾಡುವುದು ಎಂದೇ ಇಲ್ಲ. ಅಬ್ಬಬ್ಬ— ಏನು ಲಂಚ ತಿಂದಾನೋ ಮಗ, ದೇವರೇ ಬಲ್ಲ ಹಿಂದಿನ ಜನ್ಮದಲ್ಲಿ ಈ ಶ್ಯಾನುಭಾಗರೆಂಬವರೆಲ್ಲ ರಾಕ್ಷಸರಾಗಿ ಹುಟ್ಟಿದ್ದಾರೋ ದೇವರೇ ಬಲ್ಲ. ಒಬ್ಬೊಬ್ಬರು ಈ ಸರಕಾರಕ್ಕೆ ಸಿಗುತ್ತಾರೆ,

ಚಾಪೆಯಲ್ಲಿ ತಿಗಣೆಯಿದ್ದಹಾಗೆ. ಒಂದು ಅಬಕಾರಿಯವರು, ಒಂದು ಪೋಲೀಸು, ಒಂದು ಫೋರೆಸ್ಟಿನವರು - ಈ ದಾಕ್ತಾರರು! ಏನಿಲ್ಲ, ಮೊನ್ನೆ ನಮ್ಮ ದಾಕ್ತಾರ ಒಂದು ಹೆಣವನ್ನು ಸಿಗಿಯುತ್ತ ಸಿಗಿಯುತ್ತಾ ೨೦೦ ರೂಪಾಯಿ ತಿಂದುಹಾಕಿಬಿಟ್ಟ. ಇವರೇ ಕದಿಮರು; ಇವರಲ್ಲಿಯೂ ಅಂದರೆ ನಮ್ಮ ಶ್ಯಾನುಭಾಗ. ಏನಿಲ್ಲದಿದ್ದರೆ ಕೋಳಿಮರಿ ಹೊತ್ತರೂ ಹೊತ್ತನೆ!

**ರಾಮು:—** ಕೋಳಿಮರಿ ಯಾಕೆ ನಮ್ಮ ವೆಂಕಟ್ರಾಯಗೆ? ಅವನೇನು ಅದನ್ನು ತಿನ್ನುತ್ತಾನೆಯೇ?

**ರಂಗ:—** 'ನಿಮಗೋಸ್ಕರ ತರಿಸಿದೆ' ಎಂದು ಮಣೆಗಾರರಿಂದ ನಾಲ್ಕು ಕಾಸು ಒಳಗೆ ಹಾಕಲಿಕ್ಕೆ. ಅದು ಯಾರು, ಇಲ್ಲಿಗೆ ಬರುವುದು ರಾಮಣ್ಣ? (ಶ್ರೀಧರನನ್ನು ಕಂಡು)

**ರಾಮು:—** ಅದು ನಮ್ಮ ಮಾಣಿ ಶ್ರೀಧರ. ಏನು, ಇವತ್ತು ಬೇಗ ದೇವರ ಪೂಜೆಮಾಡಿ ಹೊರಟನು? ಇಲ್ಲಿಗೇ ತಿರುಗಿದನು.

**ರಂಗ:—** ತಿರುಗದೆ ಏನು ಮಾಡಿಯಾನು? ಎಲೆ ಅಡಿಕೆ ಇನ್ನೆಲ್ಲಿ ಅವನಿಗೆ ಪುಕ್ಕಸಟೆ ಕೊಡುತ್ತಾರೆ? ಮಗ ಬರಿವೇ ಬಂದು ತಿಂದು ಹೋಗುತ್ತಾನೆಯೇ? ಎರಡು ಎಲೆ ಪಟ್ಟೆಯನ್ನು ತಿಂದ; ಎರಡನ್ನು ಕೈಯಲ್ಲಿ ಹಿಡಿದ; ಇನ್ನೆರಡು ಸೊಂಟಕ್ಕೆ ಸಿಕ್ಕಿಸಿಕೊಂಡ. ಏನೋ ಮನೆಯಲ್ಲಿ ಬೆಳೆಯುತ್ತದೆ ಎಂಬುದರಿಂದ ಪೂರೈಸುತ್ತದೆ.

**ರಾಮು:—** ಯಾಕೆ ಅಂಥವರನ್ನೆಲ್ಲಾ ಮನೆಹತ್ತರ ಬರಮಾಡುವುದು? ಬೇರೆ ಕಸಬಿಲ್ಲವೋ ನಿನಗೆ?

**ರಂಗ:—** ಬೇಸರವಾದ ಗಳಿಗೆಯಲ್ಲಿ ಯಾರಾದರೂ ಹತ್ತಿರ ಇಲ್ಲದಿದ್ದರೆ ಹೊತ್ತು ಹೋಗುವುದಿಲ್ಲ. ಅಲ್ಲದಿದ್ದರೆ ಯಾರಿಗೆ ಆ

ಕಳ್ಳ ಭಟ್ಟನ ಸುದ್ದಿ ಬೇಕಿತ್ತು . . . ಹೌದೋ, ಆ ಭಟ್ಟನ ಮಗಳಿಗೆ ಎಷ್ಟು ಕರುವಾಗಿರಬಹುದು, ಇಷ್ಟರೊಳಗೆ?

**ರಾಮು:**—ಯಾವ ಮಗಳು ಅಂದೆ? ಒಬ್ಬಳೇ ಅಲ್ಲವೆ ಮಗಳು? ಅವಳೂ ವಿಧವೆ.

**ರಂಗ:**—ವಿಧವೆ! ಸಂಸ್ಕೃತ ಸಾಕು—ಮುಂಡೆ.

**ರಾಮು:**—ಸದಾ ಮುಂಡೆ ಎಂದು ಅನ್ನಬಾರದು ರಂಗಣ್ಣ. ನಮ್ಮ ಹೆಂಡರ ಮಕ್ಕಳ ಅವಸ್ಥೆ ನಾಳೆಗೆ ಏನೋ ಯಾರಿಗೆ ಗೊತ್ತು?

**ರಂಗ:**—ನಿನಗೇನು ಗೊತ್ತು ಪೆದ್ದ? ಕೆಂಪು ಸೀರೆ ಉಟ್ಟವರೆಲ್ಲ ಸನ್ಯಾಸಿಯರು ಅಂತ ತಿಳಿಯಬೇಡ. ಅಂಥಾ ಪಾಪವಾಡದೆ ಆ ಯೋಗ ಯಾಕೆ ಬರುತ್ತದೆ ಹೇಳು ನೋಡುವ! ಇರಲಿ, ಈಗ ಭಟ್ಟನ ಮಗಳ ಸುದ್ದಿ ಹೇಳುತ್ತೇನೆ, ಕೇಳು! ಕೆರೆಹತ್ತಿರ ಯಾವಾಗಲೂ ವಸ್ತ್ರ ಒಗೆಯುತ್ತಲೇ ಇರುತ್ತಾಳಲ್ಲ ಮಡಿ ವಾಳರ ಮನೆಯ ಪಟ್ಟವೇ ಅವಳಿಗೆ ಆದ ಹಾಗೆ ಕಾಣುತ್ತದೆ . . (ಶ್ರೀಧರ ಭಟ್ಟನ ಪ್ರವೇಶ . . . ) ಬನ್ನಿ ಶ್ರೀಧರ ಭಟ್ಟರೇ! ಎತ್ತ ಲಾಗಿ ಹೊರಟಿರಿ? ಬನ್ನಿ, ಬನ್ನಿ, ಬನ್ನಿ.

**ಶ್ರೀಧರ:**—ಇದೇನು, ಇವತ್ತು ಹೊಸದೊಂದು ಪ್ರಶ್ನೆ ಕೇಳುತ್ತೀರಿ ರಂಗಣ್ಣಯ್ಯ? ಇದುವರೆಗೆ ಕಟ್ಟೆ ಹಾಜರಿ ತಪ್ಪಿದ್ದುಂಟೇ?

**ರಾಮು:**—ಪೂಜೆ ಆಗಿ ಬಂದದ್ದೋ, ಆಗದೆಯೋ? ಬಹುಶಃ ಆಗಿರ ಬೇಕು. ಘಂಟೆ ೧೨ ಆಯಿತು.

**ಶ್ರೀಧರ:** – ಇನ್ನೂ ಆಗಲಿಲ್ಲಪ್ಪ. ಮಿಂದು, ಜಪಗಿಪ ಆಗಿ ದೇವ ಸ್ಥಾನಕ್ಕೆ ಹೋಗಬೇಕಷ್ಟೆ. ಎಷ್ಟೆಂದರೂ ದೇವರನ್ನು ಕಾಣುವ ಮೊದಲು ಕಟ್ಟೆಗೆ ಬಂದು ಹೋಗುವ ಮನಸ್ಸು. ರಂಗಣ್ಣ ಯ್ಯನ ಬಾಯಿಯೆಂದರೆ ಅಮೃತದ ಬಟ್ಟಲಿದ್ದ ಹಾಗೆ

**ರಾಮು:**— ಹೌದಪ್ಪ, ದೇವರಿಗಾದರೂ ಏನು ಅವಸರ?

**ರಂಗ:**— ಅವನಿಗೆ ಅಕ್ಕಿಗಿಕ್ಕಿ ನೈವೇದ್ಯ ಎಂದು ಮಾಡುವುದೇ ಹೊರತು ಅವನೇನು ತಿನ್ನುತ್ತಾನೆಯೇ? ಅವನಿಗೆ ಹಸಿವೆಂಬು ದಿದೆಯೇ? ನಮ್ಮ ಶ್ರೀಧರ ಭಟ್ಟರೇ ಇಷ್ಟು ಹಸಿದು ನಿಂತಿ ದ್ದಾರೆ, ಅವನಿಗೆ ಸುಮ್ಮನೆ ಇರಲಿಕ್ಕೆ ಬರುವುದಿಲ್ಲವೋ!

**ರಾಮು:**— ಆದರೂ ರಂಗಣ್ಣ, ನಮ್ಮ ಭಟ್ಟರು ಪೂಜೆ ಶುರುಮಾಡಿದ ಮೇಲೆ ದೇವರ ಗುಡಿಗೆ ಒಂದು ಗೆಲವು ಇದೆ, ಸುಮ್ಮನೆ ಅಲ್ಲ. ಮೊದಲು ಆ ಅರಿಷ್ಟ ಸುಬ್ಬಣ್ಣ ಪೂಜೆ ಮಾಡುವಾಗ, ದೇವರ ಗುಡಿಯೂ ಸಮ, ಬಬ್ಬರ್ಯನ ಗುಡಿಯೂ ಸಮ. ಈಗಲಾ ದರೆ ಕಾಲಕಾಲಕ್ಕೆ ಪೂಜೆ ಪುನಸ್ಕಾರಗಳೆಲ್ಲ ಹೆಚ್ಚು ಕಡಿಮೆ, ಆಗುತ್ತಾ ಇವೆ. ಅಲ್ಲದೆ ನಂದಾದೀಪ ಒಂದನ್ನು ತಪ್ಪದೆ ಉರಿ ಸುತ್ತಾನಲ್ಲ. ತಸ್ತೀಕು ಇಲ್ಲದೆ ಇಷ್ಟು ಮಾಡುವವರಾರು?

**ರಂಗ:**— ಉಂಟೇ! ಆ ಸುಬ್ಬಣ್ಣನ ರಾಜ್ಯಭಾರದಲ್ಲಿ ದೇವರದು ಕವಡಿ ಚಿನ್ನ ಸಹ ಉಳಿಯಲಿಲ್ಲ, ಮತ್ತೇನು, ಕಳೆದಸಾರಿ ಮಳೆಗಾಲದಲ್ಲಿ ತನ್ನ ಮನೆ ದನದ ಕೊಟ್ಟಿಗೆ ಸೋರಿತು ಎಂದು ದೇವರ ಮಾಡಿನ ಹುಲ್ಲನ್ನೆಲ್ಲ ತಂದು ಹೊದೆಯಿಸಿದನಲ್ಲ. ಇಂಥಾ ಮುಟ್ಠಾಳ—

**ರಾಮು:**— ಹೌದಪ್ಪ. ದೇವರಿಗೆ ಮಾಡು ಏಕೆ? ಅವನಿಗೆ ಮಳೆ ಬಂದರೆ ಚಳಿ ಆಗುತ್ತದೆಯೇ? ಸುಬ್ಬಣ್ಣನ ಲೆಕ್ಕವೇನೋ ಸಮ.

**ರಂಗ:**— ಈಗ ಅನುಭವಿಸುತ್ತಾನೆ ಮಗ ಅದರ ಪ್ರತಿಫಲವನ್ನೆಲ್ಲ. ಎಲ್ಲೆಲ್ಲಿ ಭಿಕ್ಷೆ ಬೇಡುವುದಾಯಿತು. ಸುಮ್ಮನೆ ಬೆಂಗಳೂರಿಗೆ ಎಲ್ಲಾದರೂ ಅಡುಗೆ ಕಸಬಿಗೆ ಹೋಗಬಹುದಿತ್ತು.

**ರಾಮು**:—ಅವನ ಮಗನಿಗೆ ಮಾಸ್ತರಿಕೆ ಆಗಬೇಕು ಅನ್ನುತ್ತಿದ್ದನಲ್ಲ; ಆಯಿತೇ?

**ರಂಗ**:—ನಿನಗೆ ಉದ್ಯೋಗವಿಲ್ಲ. ಅಂಥ ದರಿದ್ರ ಪಿಶಾಚಿಗೆ ಎಲ್ಲಿನ ಮಾಸ್ತರಿಕೆ ಸಿಗುತ್ತದೆ? ದೇವರೇ ಅವರ ಮೇಲೆ ಮುನಿದಿದ್ದಾನೆ.

**ಶ್ರೀಧರ**:—ಇಲ್ಲ, ರಂಗಣ್ಣಯ್ಯ. ಕೆಲಸ ಆಯಿತು. ಮೊನ್ನೆ ಪ್ರೆಸಿಡೆಂಟ ಸೋಮಯ್ಯನವರಲ್ಲಿ ಹೋಗಿ ಒಂದು ಕೆಲಸಮಾಡಿಸಿಕೊಂಡ!

**ರಂಗ**:—ಆಯಿತೇ! ಕೆಲಸ ಆಯಿತೇ? ಹೊಟ್ಟೆ ತಂಪಾಯಿತು. ಇನ್ನೇನು ಬರಗಾಲವಿಲ್ಲ. ಮಾಸ್ತರಿಕೆ ಇವರಿಗೆ; ಸಂಬಳ ಅವರಿಗೆ.

**ಶ್ರೀಧರ**:—ಅವರಿಗೆ ಅಂದರೆ......!

**ರಂಗ**:—ಅವರಿಗೆ; ಸೋಮಯ್ಯನಿಗೆ! ಅವನ ದರ್ಬಾರದಲ್ಲಿ ಇವರಿಗೆ ಸಂಬಳ ಸಿಕ್ಕುತ್ತದೆಯೇನು?

**ರಾಮು**:—ಸಿಕ್ಕಿದರೂ ಇಟ್ಟುಕೊಳ್ಳಬೇಕೋ......

**ರಂಗ**:—ಸಿಕ್ಕಿದರೆ ಅವಳಿಗೇ ಅದು. ಆ ಕಾಗೆ ಮುಸುಡಿನ ಸೋಮಿಗೆ. ಅಲ್ಲ, ಈ ಶಾಲಾ ಮಾಸ್ತರಿಗೆ ಎಂಥೆಂಥವರನ್ನೆಲ್ಲಾ ಹುಡುಕುತ್ತಾರೆ ಇವರು. ಎರಡುವರೆ ಅಕ್ಷರ ಬರುವುದರೊಳಗೇ ಮಾಸ್ತರಿಕೆ ಬಂದಾಯಿತು. ಅವರ ಕಚ್ಚೆ ಅಂಗಿ ಮೆಟ್ಟುಗಳಿಗೆ ಕಡಿಮೆ ಇಲ್ಲ. ಥಾಲಿಗೆ ಬರಗಾಲವೇ ಇಲ್ಲ.

**ರಾಮು**:—ಬೇರೆ ಯಾವ ಕಸಬು ಬಾರದಿದ್ದವರು ಈ ಮಾಸ್ತರಿಕೆಗೆ ಹೋಗುವುದು ಎಂದು ಕಾಣುತ್ತದೆ. ಈಗ ನಮ್ಮೂರಿಗೆ ಒಬ್ಬ ಹೊಸ ಮಾಸ್ತರು ಬಂದಿದ್ದಾನೆ. ಅವನ ಕುರಾಪು ಗಿರಾಪು ಕಂಡರೆ ದಿಕ್ಕು ದಿವಾನಿಯಿಲ್ಲ. ಹೊಡೆದರೆ ನಾಲ್ಕು ಅಕ್ಷರ

ಬರುವುದಿಲ್ಲ. ನಮ್ಮ ಬಾಬು ಶಾಲೆಗೆ ಹೋಗಲಿಕ್ಕೆ ತೊಡಗಿ ತಿಂಗಳು ಆರು ಆಯಿತು. ಆರು ತಿಂಗಳಿಗೆ ಆರಾರ್ಲಿ ಮುಗ್ಗಿ ಬರುವುದಿಲ್ಲ ಇನ್ನು ಪುಸ್ತಕ ಒಂದೆರಡೇ? ಮಕ್ಕಳಿಗೆ ಹೊರ ಲಿಕ್ಕೇ ಬರುವ ಹಾಗಿಲ್ಲ.

**ರಂಗ:**—ಅಷ್ಟು ಪುಸ್ತಕ ಕೊಳ್ಳದಿದ್ದರೆ, ಆ ಛಾಪಖಾನೆಯವರಿಗೆ ದುಡ್ಡು ಸಿಗಬೇಕು ಹೇಗೆ? ಇವರಿಗೂ ಏನಾದರೂ ವಟಾವು (Discount) ಗಿಟಾವು ಇರಬಹುದು.

**ರಾಮ:**—ಇಷ್ಟೆಲ್ಲ ಇರುವಾಗ ಅದಿಲ್ಲದೆ ವ್ಯಾಪಾರ ನಡೆಯು ತ್ತದೆಯೋ?

**ರಂಗ:**—ನನಗೆ ಮಕ್ಕಳಿಲ್ಲದೇ ನಾನು ಗೆದ್ದೆನು. ಇಲ್ಲದಿದ್ದರೆ ನಿನ್ನ ಹಾಗೆ ಮಗುವನ್ನು ಈ ರಾವಣಾಸುರರ ಹತ್ತಿರ ಕೊಡುವುದಲ್ಲವೆ! ಹೋದ ಕೂಡಲೇ ಶುರು—ಭೂಮಿ ಉರುಟಾಗಿದೆ—ಎಂದು. ಉರುಟಾದದ್ದು ಇವರ ತಲೆ ಬುರುಡೆ! ಇವರ ಇನೇಸಪೆಕ್ಟರರ ಡೊಳ್ಳು ಹೊಟ್ಟೆ! ಆ ಹಿರಣ್ಯಾಕ್ಷ ಚಾಪೆ ಮಡಚಿದ ಹಾಗೆ ಭೂಮಿಯನ್ನು ಮಡಚಿದ್ದು ಸುಳ್ಳಾಯಿತಲ್ಲ;

**ರಾಮ:**—ನಮ್ಮ ಹುಡುಗನೂ ನಿತ್ಯ ಬೆಳಿಗ್ಗೆ ಅದನ್ನೇ ಉರುಹಾಕು ತ್ತಾನೆ—ಭೂಮಿಯು ನಿಂಬೆಯ ಹಣ್ಣಿನಂತ ಉರುಟಾಗಿದೆ ಎಂದು.

**ರಂಗ:**—ಹೌದು, ನಿಂಬೆ ಹಣ್ಣಿನ ಹಾಗೆ ಉರುಟಾಗಿದೆ. ಕತ್ತರಿಸಿ ಗಿವುಚಿ ಸಕ್ಕರೆ ಪಾನಕ ಮಾಡಲಿಕ್ಕೆ ಹೇಳು! ಎಲ್ಲಾ ಮಿಶಿನು ಮತದವರೇ ಹೊರತು ಬೇರೆಯಿಲ್ಲ. ನಾಳೆಗೆ ನಿಮ್ಮ ಮುತ್ತಜ್ಜ ನಿಗೆ ಬುದ್ಧಿಯಿಲ್ಲ; ನಿಮ್ಮ ಹಿರಿಯರೆಲ್ಲ ಮಂಗನ ಮಕ್ಕಳು ಅಂದರೆ—ನಂಬುವವರೆ!

**ರಾಮು:**—ಅದೂ ಅಂದಾಯಿತು. ಮೊನ್ನೆ ನಮ್ಮ ಪೇಪರಿನಲ್ಲಿ ಆ ಸುದ್ದಿ ಬಂದಿತ್ತು. ಎಂಥದೋ ಒಬ್ಬ ಬಿಳಿ ಜನವಂತೆ, ಅವನ ಹೇಳಿಕೆ ಪ್ರಕಾರ, ಮನುಷ್ಯ ಮಂಗನಿಂದಲೇ ಆದ ಎಂದು.

**ರಂಗ:**—ಬಿಳಿ ಸಾಹಿಬ ಅಂದದ್ದು. ಅದು ನಿಜವೇ! ಅವರು ಮಂಗನ ಕುಲದವರೇ! ಈಗಲೂ ಮಂಗನ ಕುಲದವರೇ!

**ಶ್ರೀಧರ:**—ನಮ್ಮ ರಂಗಣಯ್ಯನ ಮಾತೆಂದರೆ ಮಾತು! ಒಳ್ಳೆ ಎರಡು ವಕೀಲರನ್ನು ಹಿಡಿದು ನಮ್ಮ ರಂಗಣಯ್ಯನ ಮುಂದೆ ಚರ್ಚೆಗೆ ಬಿಡಬೇಕು!

**ರಾಮು:**—ಅಷ್ಟು ಧೈರ್ಯ ಇದೆಯೇನು ಅವರ ಹತ್ತಿರ? ಎಲ್ಲೆಲ್ಲಿ ಹೋಗಿ ಬೆಪ್ಪು ಧೂಮನಂಥ ಮುನಸೀಫರ ಮುಂದೆ ಬಾಯಿ ತೆರೆಯುತ್ತಾರೆಯೋ ವಿನಹ, ರಂಗಣ್ಣಯ್ಯನಂಥವರ ಮುಂದೆ ಬಾಯಿ ತೆರೆಯುತ್ತಾರೇನು? (ಭಟ್ಟರು ಅಲ್ಲಿಂದೇಳುವವರಂತೆ ಅಶಾಂತವಾಗಿ ಮೈಮುರಿಯ ತೊಡಗುವರು.) ಏನು ಬೇಸರ ಆಯಿತೇ ಭಟ್ಟರೇ......ಏಳುವ ಹಾಗೆ ಕಾಣುತ್ತದೆ......ಕುಳಿತುಕೊಳ್ಳಿರಪ್ಪ. ಒಂದು ಆಟ ಆಡಿ ಹೋಗಬಾರದೇ? ಆಟ ಅನ್ನುತ್ತಿದ್ದೇನೆ. ಉಳಿದದ್ದು ಮೂರೇ ಜನ! ಇವತ್ತು ಈ ಮೂರರ ಶಾಪ ತಪ್ಪುವ ಹಾಗಿಲ್ಲ.

**ಶ್ರೀಧರ:**—ಅಲ್ಲದಿದ್ದರೆ ನನಗೆಲ್ಲಿನ ಇಸ್ಪೇಟು ಬರುತ್ತದೆ?

**ರಂಗ:**—ದುಡ್ಡಿಟ್ಟು ಆಡುವುದು ಎಂದು ಹೆದರಬೇಡ. ಪಾಂಡವರ ಹಾಗೆ ನೀನೇನು ರಾಜ್ಯ, ಮನೆ ಬಿಡಬೇಕಾಗಿಲ್ಲ.

**ಶ್ರೀಧರ:**—ಹ್ಹ. ಹ್ಹ. ಹ್ಹ. ನಮ್ಮ ರಂಗಣ್ಣಯ್ಯನ ತಮಾಷೆ ಅಂದರೆ...

**ರಾಮು:**—ರಂಗಣ್ಣ, ಪಾಂಡವರ ಕಾಲಕ್ಕೆ ಇಸ್ಪೇಟು ಇದ್ದಿರಲಿಲ್ಲವೋ? ಹೆಣ್ಣು ಮಕ್ಕಳ ಆಟ, ಪಗಡೆ ಆಡುವ ಬದಲಿಗೆ

ಇಸ್ಪೇಟು ಆಡಬಹುದಿತ್ತು ಅವರು. ಆಗಲಾಗಿದ್ದರೆ ಶಕುನಿಗೆ ನಡುವೆ ಟಸ್ಕುಪುಸ್ಕು ಮಾಡಲಿಕ್ಕೆ ಬರುತ್ತಿರಲಿಲ್ಲ.

**ರಂಗ:**— ಊಹೂಂ, ಆಗಲೂ ಇಸ್ಪೇಟು ಇದ್ದಿರಲಿಲ್ಲ ಎಂದು ತಿಳಿಯು ಬೇಡ! ಹಿಂದೆ ವಿಮಾನ ಇದ್ದಿರಲಿಲ್ಲವೋ. ಈಗಲೇ ಹೊಸ ದಾಗಿ ಮಾಡಿದರು ಎಂದು ತಿಳಿದಿದ್ದೀಯಾ? ಇಲ್ಲಿನ ಅಥರ್ವಣ ವೇದ ಕದ್ದುಕೊಂಡು ಹೋಗಿ ಈಗ ಒಂದೊಂದೇ ಹೊರಗೆ ತರುತ್ತಾರೆ ಮುಕ್ಕಳು. ಇಸ್ಪೀಟೂ ಹಾಗೆಯೇ, ಇನ್ನೇನು?

**ರಾಮು:**— ಅಲ್ಲ, ಆ ಪೇಪರಿನವ, ನಮ್ಮ ದೇಶಬಂಧು ಪೇಪರಿನವನು ಇವೆಲ್ಲ ಹೊಸ ಶೋಧನೆ ಅನ್ನುತ್ತಾನಲ್ಲ!

**ರಂಗ:**— ನಿನ್ನಂಥ ಮುಂಕುಗಳು ೩ ರೂಪಾಯಿ ದಂಡ ತೆತ್ತು ಅವನ ಸುಳ್ಳಂಬಳ್ಳಿ ಓದಲಿಕ್ಕೆ ತಯಾರಿರುವಾಗ ಅವನು ಬರೆಯುದೆ ಏನು ಮಾಡಿಯಾನು? ಈ ಪೇಪರಿನವರು ಬರೆದದ್ದೆಲ್ಲ ಪಂಚಮ ವೇದ ಎಂದು ತಿಳಿಯುಬೇಡ!

**ಶ್ರೀಧರ:**— ಹೊತ್ತಾಯಿತು. ಇನ್ನು ಸ್ನಾನ ಸಹ ಆಗಲಿಲ್ಲ...... ದೇವಸ್ಥಾನಕ್ಕೆ ಹೋಗಲೇ?

**ರಂಗ:**— ಹೌದಪ್ಪ. ಹೋಗು, ನಮ್ಮಿಂದಾಗಿ ದೇವರ ಪೂಜೆ ಏಕೆ ತಪ್ಪಬೇಕು?

**ಶ್ರೀಧರ:**— ಹಾಗೇನಲ್ಲ, ಬಹಳ ತಡವಾದರೆ ಮನೆಯುವಳು ಬೈದಾಳಲ್ಲ. (ಹೋಗುವನು.)

**ರಂಗ:**— ಇವರೆಲ್ಲ ಹೆಂಗಸರಿಗೆ ಮಾರಿಹೋದ ಗಂಡಸರು ಎಂದು ಕಾಣುತ್ತದೆ. ನಾನು ಬರೇ ರಾಮಣ್ಣ ಒಬ್ಬನೇ ಹಾಗಿರುವವನೆಂದು ತಿಳಿದಿದ್ದೆ. ಹೋದನೇನು? ಹೋಗಲಿ . . . ಒಳ್ಳೇದಾಯಿತು. ಅವನದೇ ಸುದ್ದಿ ಹೇಳಬೇಕು ಎಂದು ಬಾಯಿತೆರೆದು ನಿಲ್ಲಿಸಿದೆ.

**ರಾಮು:**—ಅದೇನೋ ಅವನ ಮಗಳ ವಿಷಯ ಅನ್ನುತಿದ್ದೆಯಲ್ಲ.

**ರಂಗ:**—ಅಂದರೆ ಬಾಯಿತೊಳೆಯುವ ಸಂಗತಿಯೇ ಸರಿ.

**ರಾಮು:**—ಏನೇನು?

**ರಂಗ:**—ನಾನು, ಇವತ್ತು ಬೆಳಿಗ್ಗೆ ಮುಖತೊಳೆಯುವ ಎಂದು ಕೆರೆಗೆ ಹೋಗಿದ್ದೆ. ಅಲ್ಲಿ ಇವರ ಸವಾರಿಯೆಲ್ಲ ಜಮಾಯಿಸಿತ್ತು.

**ರಾಮು:**—ಇವರೆಂದರೆ?

**ರಂಗ:**—ನನ್ನ ಕಣ್ಣಿಗೆ ಬಿದ್ದದ್ದೆಂದರೆ—ಅವಳೊಬ್ಬಳು, ಶ್ರೀಧರನ ಮಗಳು. ಇನ್ನೊಂದು ಹೆಂಗುಸು ಯಾರೆಂದು ತಿಳಿಯಲಿಲ್ಲ. ಬೆಳ್ಳಂಬೆಳ್ಳಗಾಗಿ ಅಡಿಕೆ ಮರದ ಹಾಗಿದ್ದಳು.

**ರಾಮು:**—ಅಂದರೆ . . . .

**ರಂಗ:**—ಅಂದರೇನಿಲ್ಲ, ೬ ಕೋಲು ಎತ್ತರ ಉಂಬಲ್ತಿ[1] ಹಾಗೆ ನಿಂತಿದ್ದಳು. ಅವಳು ಬಾಯಿಯೆಂದರೆ ಜಗನ್ನಾಥದ ಜಾಗಟೆ ಬಡಿದ ಹಾಗೆ! ಅಬ್ಬಬ್ಬ—ಒಂದು ಹೆಂಗಸು ಅಂದರೆ ಹೆಂಗಸು. ಊರಿಗೆ ಒಂದು ರತ್ನ! ನಮ್ಮೂರಿನ ಹುಡುಗಿಯಲ್ಲ. ಯಾರ ಮನೆಯೋ ಏನೋ. ಅವಳ ಹತ್ತಿರ ಶ್ರೀಧರನ ಈ ಆನೆಮರಿ ನಗುತ್ತ ನಗುತ್ತ ಪಟ್ಟಾಂಗ ಹೊಡೆಯುತ್ತಿತ್ತು. ಅವಳನ್ನು ಕಂಡರೆ, ಸಾಧಾರಣ ೭–೮ ತಿಂಗಳಾದರೂ ಆಗಿರಬೇಕು ಎಂದು ಕಂಡಿತು. ಕಳೆದ ವರುಷವೂ ಹಾಗೆಯೇ ಕಾಣಿಸಿತ್ತು. ವರ್ಷಕ್ಕೆ ಒಂದೊಂದು ಮಗುವನ್ನು ಹಿಚುಕುತ್ತಾಳೋ ಈ ಪೂತನಿ ದೇವರೇ ಬಲ್ಲ. ಶ್ರೀಧರನ ಮಗಳು ಹಾಗೆ ಆನೆಮರಿಯ ಹಾಗೆ ಬೆಳೆಯಬೇಕಾದರೆ ಒಳಗಿನ ಗುಟ್ಟು ಏನೋ ಇರಬೇಕು. ನಿತ್ಯವೂ ಅವರ ಮನೆಯಲ್ಲಿ ಹಾಲುಪಾಯಸವೇ ಆಗುತ್ತಿರಬೇಕು.

1 ಹೆಣ್ಣು ಭೂತವೊಂದರ ಹೆಸರು.

**ರಾಮು:**— ದೇವಸ್ಥಾನದ ಹಾಲು ನೈವೇದ್ಯವಿದೆಯಲ್ಲ ಅಗ್ಗದ್ದು. ಎಣ್ಣೆ ಕದಿಯುವ ಭಟ್ಟ ಅದನ್ನು ಬಿಡುತ್ತಾನೆಯೇ?

**ರಂಗ:**— ಛೇ, ಹಾಲು ನೈವೇದ್ಯ ತಪ್ಪಿ ನಾಲ್ಕು ವರುಷವಾಯಿತು. ತಸ್ತೀಕಿನ ಹಿಂದೆಯೇ ಹಾಲೂ ಹೋಯಿತು, ನೈವೇದ್ಯವೂ ಹೋಯಿತು. ಇವತ್ತು ನೋಡಿದೆಯಲ್ಲ: ಅವನು ದೇವ ಸ್ಥಾನಕ್ಕೆ ಬರಿಕೈಯಲ್ಲಿ ಹೋದದ್ದನ್ನು. ಒಂದು ಪಾವು ಬೆಳ್ತಿಗೆ ಅಕ್ಕಿ ತೆಗೆದುಕೊಂಡು ಹೋದರೆ ಸಂಕಟವೇ? ಅದಲ್ಲ, ಸಂಪಾದನೆಗೇ ಅವಳು ಶುರುಮಾಡಿರಬೇಕು.

**ರಾಮು:**— ಇದ್ದರೂ ಇರಬಹುದು, ಯಾರಿಗೆ ಗೊತ್ತು?

**ರಂಗ:**— ಅವಳ ಜತೆಯವಳ ಬಾಯಿ ನೋಡಿದರೆ ಒಂದು ದಲಾಲಿ ಹಾಗೆ ಅನಿಸಿತು ನನಗೆ. ನಮ್ಮೂರಿಗೆ ಯಾರಾರೆಲ್ಲ ಹೊಸ ಜನರು ಬರುತ್ತಾರೋ ದೇವರೇ ಬಲ್ಲ. ಆ ಮಾಸ್ತ ಇದ್ದಾಗ ಒಂದು ದೇವಿ ಬಂದಿತ್ತು. ಈ ಮಾಸ್ತ ಇನ್ನೊಂದು ತಂದಿದ್ದಾನೋ ಏನೋ.

(ಐತ್ತಪ್ಪ ಬರುವನು-ನಿನಗ್ಯಾರು ಗತಿಯಿಲ್ಲ,ಯನಗನ್ಯ ಮತಿಯಿಲ್ಲ . . ಎಂಬ ಹಾಡನ್ನು ಹಾಡುತ್ತಿರುವನು.)

ಹಾ, ಬಂದ, ನಮ್ಮ ಐತುದಾಸ! "ನಿನಗ್ಯಾರು ಗತಿಯಿಲ್ಲ. ನನಗನ್ಯ ಮತಿಯಿಲ್ಲ." ಬೇಷ್ ಹಾಡು ತೆಗೆದ. ನಮಗೂ ಯಾರೂ ಗತಿಯಿಲ್ಲ. ಭಟ್ಟರು ಹೋದರು; ಇವನು ಬಂದ. ತಿರುಗಿ ಉಳಿದವರು ಮೂರೇ ಮಂದಿ. ಈ ಹೊತ್ತಿನ ಇಡಿಗೂ ನಮ್ಮ ಗೀತೆ ಪಾರಾಯಣ ಆಗುವ ಹಾಗಿಲ್ಲ . . . ನಿಲ್ಲಿಸಬೇಡಿರಿ ದಾಸರೇ, ಅದೇ ಹಾಡನ್ನು ಹಾಡಿರಿ . . . ನನಗ್ಯಾರು ಗತಿಯಿಲ್ಲ . . . ನಿನಗನ್ಯ ಮತಿಯಿಲ್ಲ . . .

**ಐತು:**—ಹೊತ್ತು ಬಹಳ ಆಯಿತು. ಒಂದು ಹಾಡನ್ನು ಹಾಡಿ ಹೋಗುತ್ತೇನೆ.

(ಯನಗ್ಯಾರು ಗತಿಯಿಲ್ಲ—ಎಂಬ ಹಾಡನ್ನು ಹಾಡಿ ಮುಗಿಸುವನು.)

**ರಾಮು:**—ಇನ್ನೊಂದು ಹಾಡು ಹಾಡಿರಪ್ಪ ದಾಸರಿಗೆ ಹೊತ್ತು ಎಂದರೇನು. "ಹೊತ್ತು ಹೊತ್ತೆಂಬುವುದು ತೊತ್ತುಗಳ ಚಿಂತೆಯದು . . ." ಎಂದು ಒಬ್ಬರು ದಾಸರೇ ಅಂದಿದ್ದಾರಲ್ಲ . . . ಬೇರೆ ಏನಾದರೂ ಒಂದು ಹಾಡನ್ನು ಹಾಡಬಾರದೇ!

**ಐತು:**— ಇಲ್ಲ, ಮಧ್ಯಾಹ್ನವಾಯಿತು. ಮಕ್ಕಳೂ ಹಸಿದಿದ್ದಾರೆ . . . ದುರ್ದೈವಕ್ಕೆ ಒಂದು ಪಾವು ಅಕ್ಕಿಯೂ ಇವತ್ತು ಸಿಗಲಿಲ್ಲ. ಎಲ್ಲರೂ ಹೊಲ, ಕಾಡು, ಎಂದು ಹೋಗಿದ್ದಾರೆ. ಬೇಸಾಯದ ಪ್ರಾರಂಭವಷ್ಟೆ. ಇನ್ನು ಇಲ್ಲಿಂದೇನಾದರೂ ತೆಗೆದುಕೊಂಡುಹೋದರುಂಟು.

**ರಂಗ:**— ದಾಸರೆ, ನಿಮ್ಮ ನೆನಪೂ ಹೋಯಿತು. ನೀವು ಬರುವುದರಲ್ಲಿ ಊಟವೂ ಆಯಿತು. ಮಧ್ಯಾಹ್ನದ ಮೇಲೆ ಭಿಕ್ಷೆ ಹಾಕಿದರೆ ಮನೆಯುವಳು ಕಿಡಿಯಾದಾಳು

**ರಾಮು:**— ಸಹಜ ಅಲ್ಲವೋ ರಂಗಣ್ಣ. ಮಧ್ಯಾಹ್ನ ಭಿಕ್ಷೆನೀಡಿದರೆ ಲಕ್ಷ್ಮಿ ಹೊರಟುಹೋಗುತ್ತಾಳಂತೆ! ನಾನೇನಾದರೂ ಕೊಡುವ ಎಂದು ಯೋಚಿಸಿದರೆ, ಆ ಪಾವಲಿಯೂ ಸಿಗಲಿಲ್ಲ. ಎರಡಾಣೆ ವ್ಯರ್ಥ ಆಯಿತು.

**ರಂಗ:**— ಎರಡಾಣೆ ಅನ್ನುವಾಗ ನೆನಪಾಗುತ್ತದೆ. ಅಂಥದೊಂದು ಹಾಡುಂಟಲ್ಲ ದಾಸರೇ! "ನನಗೂ ಆಣೆ, ನಿನಗೂ ಆಣೆ"—ಬಲು ಧೀರ ಅಪ್ಪ ಪುರಂದರ. ಗಡಸು ಅಂದರೆ ಗಡಸು. ಹಾಡಿ, ಹಾಡಿ.

**ಐತು:**— ಇಲ್ಲ ಹೊತ್ತಾಯಿತು ಹೋಗುತ್ತೇನೆ. ಎಲ್ಲಿಂದಲಾದರೂ ಪಾವು ಅಕ್ಕಿ ಕಡವಾಗಿಯಾದರೂ ತರಬೇಕು.

**ರಂಗ:**— ಕಡಗಿಡ ಏನು ಬೇಡ. ಇಲ್ಲೇ ಉಂಡು ಹೋಗುವಿಯಂತೆ. ಅನ್ನ ಉಳಿದಿದೆಯೇ ಎಂದು ವಿಚಾರಿಸುವ. ಅವಳು ಊಟಕ್ಕೆ ಕುಳಿತಿರಬೇಕು. ಊಟ ಆಗಲಿ. ಅಲ್ಲಿಯು ತನಕ ಒಂದು ಹಾಡು ಆಗಲಿ. ಮಧ್ಯಾಹ್ನದ ನಂತರ ಭಿಕ್ಷೆ ಹಾಕಬಾರದೇ ವಿನಹ, ಮಧ್ಯಾಹ್ನ ಬಂದವರಿಗೆ ಅನ್ನ ಹಾಕಬಾರದು ಎಂದಿಲ್ಲವಲ್ಲ.

**ಐತು:**— ನಿಮ್ಮ ಮನಸ್ಸು ಅಂದರೆ ಧಾರಾಳವಪ್ಪ. ನಿಮಗೆ ಸಂತೋಷ ವಾಗುವುದಾದರೆ, ಹಾಡುತ್ತೇನೆ ಏನೋ ಪರಮಾತ್ಮನ ಇಷ್ಟ.

**ರಾಮು:**— ಅವನ ಇಷ್ಟದಿಂದ, ನಿಮ್ಮಿಂದ ಎಷ್ಟು ಸೇವೆ ಆಗುತ್ತದೋ ಆಗಲಿ.

**ಐತು:**— «ನನಗೂ ಆಣೆ ಕೃಷ್ಣಾ ನಿನಗೂ ಆಣೆ। ನನಗು ನಿನಗು ನಮ್ಮಿ ಬ್ಬರಿಗೂ ಭಕ್ತರ ಆಣೆ।» (ಎಂಬ ಹಾಡನ್ನು ಹಾಡಿ ಮುಗಿಸುವನು.)

**ರಂಗ**--ರಾಮ, ರಾಮ, ರಾಮ! ಏನು ಭಕ್ತನಯ್ಯ ಪುರಂದರ! ವಾಲ್ಮೀಕಿ, ವ್ಯಾಸ, ಸೂತ, ವಿದುರ-ಎಲ್ಲರು ಸುಳ್ಳು. ಆಂಜ ನೇಯ ಸಹ ಸುಳ್ಳು. ಪುರಂದರನ ಭಕ್ತಿಯೇ ಭಕ್ತಿ.

(ಅವಸರದಿಂದ ಶ್ರೀಧರ ಭಟ್ಟರ ಕಿರಿಯ ಹುಡುಗನು ಅಳುತ್ತ ಗಾಬರಿ ಯಿಂದ ಅಲ್ಲಿಗೆ ಬರುವನು.)

**ಹುಡುಗ:**— ರಂಗಣ್ಣಯ್ಯ, ಅಪ್ಪಯ್ಯ ಇಲ್ಲಿಗೆ ಬಂದರೇ?

**ರಂಗ:**— ಬಂದು ಹೋದರಷ್ಟೇ; ದೇವಸ್ಥಾನಕ್ಕೆ ಹೋದರು.

**ಹುಡುಗ:**— ದೇವಸ್ಥಾನಕ್ಕೇನು? (ಅವಸರದಿಂದ ಓಡುವನು.)

**ರಂಗ:**— ನಿಲ್ಲಪ್ಪ, ನಿನಗೆ ಇಸ್ಪೀಟು ಬರುತ್ತದೆಯಲ್ಲವೋ? ಸರಿ, ನಾಲ್ಕು ಜನವಾಯಿತು ದಾಸರನ್ನು ಕೂಡಿ.

**ಹುಡುಗ:**— ಇಸ್ಪೀಟು ಹಾಳಾಯಿತು. ಅಪ್ಪ ಅಲ್ಲೇ ಇರಬಹುದೇ ಈಗ?

**ರಾಮು:**—ಏನು ಅಷ್ಟು ಗಾಬರಿ?

**ಹುಡುಗ:**—ಅಕ್ಕ ಕೆರೆಗೆ ಹಾರಿಕೊಂಡು . . . (ಓಡುವನು.)

**ರಂಗ:**—ಅಕ್ಕ ಕೆರೆಗೆ ಹಾರಿದಳೇ!

**ರಾಮು:**—'ಅಕ್ಕ' ಅಂದರೆ ನೀವು ಹೇಳಿದ ಆ ಹುಡುಗಿಯೇ?

**ರಂಗ:**—ನಿನಗೆ ಕೆಲಸವಿಲ್ಲವೆ? ಕೆರೆಗೆ ಯಾರನ್ನಾದರೂ ತಳ್ಳುವ ಮಗಳು ಅವಳು. ಕೆರೆಗೆ ಹಾರುತ್ತಾಳಲ್ಲ! ಏನಾಗಿದೆಯಂತೆ? ಎಲ್ಲಾದರೂ ಗುಟ್ಟು ರಟ್ಟಾಯಿತು— ಎಂದು ಹಾರಿರಬೇಕು.

**ರಾಮು:**—ಇನ್ನೆಂಥ ಮಾನಮರ್ಯಾದೆ ಅವಳಿಗೆ! ಹೋಗಲಿಕ್ಕೇನು ಉಳಿದಿದೆ? ಉಳಿಯಲಿಕ್ಕೇನು ಉಂಟು? ಆದರೂ ಬಿದ್ದರೆ ಒಂದು ನೆರೆಯೇ ಬಂದೀತು ಊರಿಗೆ . . . .

**ಐತು:**—ಏನು ಸುದ್ದಿ ಸ್ವಾಮಿ? ಭಟ್ಟರ ಮಗಳು ಸತ್ತಳೇ!

**ರಂಗ:**—ಸಾಯುವುದು ಮಾನ ಇದ್ದವರು . . . .

**ಐತು:**—ಏನಾಯಿತು ಆ ಹೆಣ್ಣು ಮಗಳಿಗೆ?

**ರಂಗ:**—ಆಗುವುದೇನು? ಒಂಭತ್ತು ತಿಂಗಳು. ಸಾಯಲಿ, ಆ ವಿಚಾರ. ನೀರು ಸಿಗಲಿಕ್ಕಿಲ್ಲ ಅವಳ ಹೆಸರು ಹೇಳಿದರೆ.

**ರಾಮು:**—ಅಲ್ಲ, ಎಂಥಾ ಕಥೆಯಿದು ಎಂದು ತಿಳಿದುಕೊಂಡು ಬರುತ್ತೇನೆ. ಹೋಗಿ ನೋಡಿ ಬರಲೇ?

**ರಂಗ:**—ಸುಮ್ಮನಿರು ರಾಮು. ಇನ್ನರ್ಧ ಗಳಿಗೆಯಲ್ಲಿ ಎಲ್ಲಾ ತಿಳಿಯುತ್ತದೆ. ಅಂಥಾದ್ದಾಗಿ ಅವಳು ಕೆರೆಗೆ ಹಾರಿದ್ದರೆ, ಯಾರಾದರೂ ತೆಗೆದು ಹಾಕುವವರು ಹತ್ತಿರ ಇದ್ದುದನ್ನು ನೋಡಿಯೇ ಹಾರಿಯಾಳು. ಗಂಡ ಸತ್ತ ಕೂಡಲೇ ಅವಳು ಬಾವಿ ಹಾರಿದ ಕತೆ ಕೇಳಲಿಲ್ಲವೆ?

**ರಾಮು:**—ಏನೇನು?

**ರಂಗ:**— ಗಂಡನ ಶ್ವಾಸ ಹೋಗುತ್ತಲೇ, ಬಾವಿಗೆ ಹಾರಿದಳು. ಅದರಲ್ಲಿ ನೀರೂ ಇರಲಿಲ್ಲ. ಕೂಡಲೇ ಪೆಟ್ಟಾಗಿ "ಅಯ್ಯೋ ನನ್ನನ್ನು ತೆಗೆಯಿರೋ, ಸಾಯುತ್ತೇನೆ" ಎಂದು ಕೂಗಿದಳು.

**ಐತು:**— ಆಗ ಸಣ್ಣ ಹುಡುಗಿ ಆಗಿದ್ದಳು ಪಾಪ. ಏನು ಗೊತ್ತು ಅವಳಿಗೆ; ದುಃಖವಾಯಿತು.

**ರಂಗ:**— ಆಗ ಸಣ್ಣ ಹುಡುಗಿ, ಈಗ ಸ್ವಲ್ಪ ದೊಡ್ಡ ಹುಡುಗಿ. ಅದಕ್ಕೆ ಬಾವಿ ಹಾರುವ ಬದಲು, ಬಾವಿ ಹಿಡಿಯಲಿಕ್ಕಿಲ್ಲವೆಂದು ಕೆರೆಗೆ ಹಾರಿರಬೇಕು. ಇನ್ನು ನಾಲ್ಕು ವರುಷ ಹೋದರೆ ಕೆರೆಯು ಹಿಡಿಯುವುದೂ ಕಷ್ಟ!

**ಐತು:**— ನನಗೆ ತಿಳಿಯಲೇ ಇಲ್ಲ

**ರಂಗ:**— ದಾಸರೇ, ಸಂಸಾರಿಗರ ಹೊಲಸು ಅದು. ನೀವು ತಿಳಿದಾದರೂ ಏನು ಮಾಡುತ್ತೀರಿ. ನಮಗೇ ಕೇಳಿ ಇಷ್ಟು ವ್ಯಥೆಯಾಗುತ್ತದೆ ನಿಮಗೆ ಎಷ್ಟು ಆಗಲಿಕ್ಕಿಲ್ಲ. ಬಿಡಿ ಒಂದು ಹಾಡನ್ನು ಹಾಡಿರಿ. ಒಳಗೆ, "ಢಣ ಢಣ" ಪಾತ್ರೆ ಸದ್ದಾಯಿತು. ಮನೆಯಜಮಾನಿ ಹೋದವಳು ಬರುವ ತನಕ ಒಂದು ಹಾಡಾದರೂ ಆಗಲಿ. ಇವತ್ತು ಭಗವದ್ಗೀತೆಯ ಬದಲು ಪುರಂದರನ ಕೀರ್ತನೆಯೇ ಆಯಿತು.

(ಪ್ರವೇಶ. ಭಾಗಮ್ಮ. ರಾಮಣ್ಣನ ಹೆಂಡತಿ. ನೀಳ ಶರೀರ. ಬಿಳಿ ಬಣ್ಣ . . . ಬಂದವಳು ಜಗುಲಿಯ ಹೊರಗೇ ಮಗ್ಗುಲಲ್ಲಿ ನಿಲ್ಲುವಳು.)

**ಭಾಗಮ್ಮ:**—(ಆ) ಹೂಂ, ನಮ್ಮ ಯಜಮಾನರೂ ಇದ್ದಾರೆ ಇಲ್ಲಿ. ಬೀಜ ಬಿತ್ತಿಸಿ ಬನ್ನಿ ಅಂದರೆ ಕಣ್ಣು ತಪ್ಪಿಸಿಕೊಂಡು ಇಲ್ಲಿ ಬಂದಿದ್ದಾರೆ. ಇದೇ ಇರಬೇಕು ರಂಗಣ್ಣಯ್ಯನ ಕಟ್ಟೆ. ನೋಡುವ,

ಏನೇನೂ ಮಾತಾಗುತ್ತದೆ ಎಂದು. ಬೆಳಿಗ್ಗೆ ಕೆರೆಗೆ ಬಂದು ಬೈದು ಹೋದ ತೊಣಪನೂ ಇಲ್ಲೇ ಇದ್ದಾನೆ!

**ರಂಗ:**— ಏ ರಾಮಣ್ಣ, ಅದೇ ಜನವೋ ನಾನು ಅಂದದ್ದು.

**ರಾಮು:**— ಯಾರು, ಏನು ಜನ?

**ರಂಗ:**— ಆಗ ಹೇಳಿದೆನಲ್ಲಯ್ಯಾ, ರಾಮಾಯಣದ ಶೂರ್ಪನಖಿ ಯಂತೆಯೂ, ಮಹಾ ಭಾರತದ . . .

**ರಾಮು:**— ಏನು ಸಮಾಚಾರವೆಂದು ತಿಳಿಯಲೇ ಇಲ್ಲವಲ್ಲ.

**ರಂಗ:**— ಅಡಿಕೆ ಮರದ ಸಂಗತಿ ಹೇಳಿದೆನಲ್ಲ. ಅಡಿಕೆ ಮರದ ಬಳಿ ಆನೆ ಬಂದಿತ್ತು ಎಂದು. ಆನೆಯಲ್ಲ, ಆನೆಮರಿ.

**ರಾಮು:**— ಹಾ, ಆ ವಿಚಾರವೋ . . . . ಈಗ ಆಡುತ್ತಿದ್ದುದೇ ಸಂಗತಿ. ಆದರೆ ಅಡಿಕೆ ಮರ ಯಾರು ಎಂದು ತಿಳಿಯಲೇ ಇಲ್ಲ.

**ರಂಗ:**— ಅಲ್ಲೇ ಬಂದು ನಿಂತಿದೆಯಲ್ಲ. ಅದೇ ಜನ ಅಂದದ್ದು ಬೆಳ್ಳಕ್ಕಿ ಹಾಗೆ ಕೈ, ಕಾಲು, ಬಣ್ಣ, ತಿಣ್ಣ ಎಂದು.

**ರಾಮು:**— ಯಾರು ಎಲ್ಲಿ-? (ಹೆಂಡತಿಯನ್ನು ಕಂಡು ಗಾಬರಿಯಾಗಿ) ಯಾರು ಅವಳೇ!

**ರಂಗ:**— ಹೆದರಿ ಬಿಟ್ಟೆಯಾ? ಹೆದರುವುದೇ ಸರಿ! ಸಾಮಾನ್ಯ ಜನ ವಲ್ಲ. ಅಬ್ಬಾಬ್ಬಾ ಬಾಯಿಯೆಂದರೆ ಭಯಂಕರ. ಒಂದು ಜನ ಇದ್ದರೆ ಸಾಕು; ಸಾವಿರ ಸಂತೆ ನೆರೆಯಿಸಿದ ಫಲ.

**ರಾಮು:**— ಬದಲು ಏನಾದರೂ ಮಾತನಾಡು ರಂಗಣ್ಣ.

**ರಂಗ:**— ಏನು, ಖಂಡಿತಕ್ಕೂ ಹೆದರಿದ ಹಾಗಿವೆ ನೀನು. ಈ ದಳ್ಳಾಳಿಗಳಿಗೆ ನೀನು ಹೆದರುವುದೇ? ಪ್ರಾಯಶಃ ಮನೆಯೊಳ ಗಿನವಳು ಅಷ್ಟು ಮಾಡಿಸಿದ್ದಾಳೆ ನಿನ್ನನ್ನು; ಆ ಜೇಡಿ ಹುಡುಗಿ! ಅದಕೇ ಬಿಳಿ ಬಣ್ಣದ ಜನವೆಂದರೆ ದಿಗಿಲು ಹಾರುತ್ತದೆ.

**ರಾಮು:**— ರಾಮಣ್ಣ, ಏನೇನು ಅಸಂಬದ್ಧ ಮಾತನಾಡಬೇಡ. ಮನೆ ಹೆಣ್ಣು ಮಕ್ಕಳ ಸುದ್ದಿಯೆಲ್ಲ ಇಲ್ಲಿ ಬೇಡ.

**ರಂಗ:**— ಬಹಳ ಭಯ, ಭೀತಿ, ಭಕ್ತಿಯಿರಿಸಿದ ಹಾಗೆ ಕಾಣುತ್ತದೆ-ನೀನು. ಕಲಿಯುಗವಲ್ಲವೋ. ಪಾತಿವ್ರತ್ಯ ತೋರಿಸುವ ಕಾಲವಿದು. ನಮ್ಮ ಮಾಸ್ತರು ತೋರಿಸಿದ ಹಾಗೆ......ಕಡೆಗೂ ಇದೂ ಮಾಸ್ತರನದೇ ಅಸಾಮಿಯೇ? ಇಲ್ಲೇನು ಕಟ್ಟೆಯ ಹತ್ತಿರ ಬಂದು ನಿಂತಿತು? ಇವತ್ತು ರಾಮಾಯಣ ಇದೆಯೆಂದು ಯಾರು ಹೇಳಿದರು? ರಾಮಾಯಣಕ್ಕೆ ಜನ ಮಾತ್ರ ಒಳೆಯದೇ ಸಿಕ್ಕಿತು. ಆದರೊಳಗಿನದೇ ಜನ . . .

(ಭಾಗಮ್ಮ ತಿರುಗುವಳು, ರಂಗಣ್ಣಯ್ಯನ ಸ್ವರ ಅಡಗುವುದು.)

**ಐತು:**— ಹೋಗಿಬರಲೇ ರಂಗಣ್ಣಯ್ಯ. ನಮೂನೆ ನೋಡಿದರೆ ಅನ್ನ ಉಳಿದಿರುವ ಹಾಗಿಲ್ಲ.

**ರಂಗ:**— ಉಳಿಯದಿದ್ದರೆ ಮಾಡಿಸುವುದು ಎಷ್ಟರ ಕೆಲಸ? ಈಗ ಮಾಡಿಸುತ್ತೇನೆ. ಓ, ಇವಳೇ, ನಮ್ಮ ದಾಸರು ಬಂದಿದ್ದಾರೆ. ಅನ್ನ ಇದೆಯೋ ಏನು? ಇಲ್ಲದಿದ್ದರೆ ಥಟ್ಟನೆ ಒಂದು ಪಾವು ಅಕ್ಕಿ ಬೇಯಿಸಿಬಿಡು. ಆಯಿತಲ್ಲ, ಅಂದರೆ ಏಕೋ ಇವತ್ತು ಇಸ್ಪೀಟು ಆಡದೆ ಮನಸ್ಸಿಗೆ ಸಮಾಧಾನವಿಲ್ಲ. ಮೂರು ಜನವಾಯಿತು. ಆಡಲಿಕ್ಕೆ ಬಂದರೆ ನಾಲ್ಕನೇ ಜನವೂ ಇದೆಯೆನ್ನುವ.

**ರಾಮು:**— ರಂಗಣ್ಣ, ಬಹಳ ಸಡಿಲಾಯಿತು ನಿನ್ನ ನಾಲಿಗೆ!

**ಭಾಗಮ್ಮ:**— (ಮುಂದೆ ಬಂದು) — ಏನು, ಬೀಜ ಬಿತ್ತಿಸಿ ಬಂದಾಯಿತೇನು? ನನ್ನ ಕಣ್ಣು ತಪ್ಪಿಸಿ ಇಲ್ಲಿಗೆ ಬಂದು ಕುಳಿತಿರಾ?

**ರಂಗ:**— (ಗಾಬರಿಯಾಗಿ) ಯಾರು, ನಿನ್ನ ಹೆಂಡತಿಯೇ! ಮನೆಗೆ ಹೋಗಬಾರದೋ, ರಾಮಣ್ಣ? ಸುಮ್ಮನೆ ಮನೆಯವರಿಗೆ

ಎಷ್ಟು ಎಂದು ತ್ರಾಸಕೊಡುವುದು. ಅಡುಗೆಮಾಡಿ ತಣಿದು ಹೋಗಿದ್ದೀತು. ಹೋಗು, ಹೋಗು. ಪಾಪ. ಅಲ್ಲಿಂದಿಲ್ಲಿಯ ವರೆಗೆ ಕರೆಯಲಿಕ್ಕೆ ಬರಬೇಕು ಅಂದರೆ . . .

**ಭಾಗಮ್ಮ:**— ಸಾಕು ರಂಗಣ್ಣಯ್ಯ ನನಗೆ ಗೊತ್ತು. ನನಗೆ ಕಿವಿ ಯಿಲ್ಲ ಎಂದು ತಿಳಿಯಬೇಡಿ! ನಿಮ್ಮ ಮನೆ ನಂಜಮ್ಮ ಒಳಗಿ ಲ್ಲವೇ? ನಂಜಮ್ಮ ಆದದ್ದಕ್ಕೆ ನಿಮ್ಮ ನಾಲಿಗೆಯನ್ನು ಅಷ್ಟು ಸಡಿಲು ಬಿಡುತ್ತೀರಿ. ಸ್ವಲ್ಪ ಬುದ್ಧಿಯಿದ್ದ ಹೆಂಗುಸಾದರೆ ನಿಮ್ಮ ಕಟ್ಟೆ ಪುರಾಣ ಎಂದೋ ನಿಲ್ಲಿಸುತಿದ್ದಳು! ಯಾರಾರ ನಿಂದೆ ಮಾಡುತ್ತ ಬಿದ್ದಿರುವ ಗಂಡಸರು ನೀವು . . . .

**ರಾಮು:**–ಭಾಗಿ, ಏನು ಸಿಟ್ಟು ಇದು? ಯಾರ ಮೇಲೆ ತೆಗೆಯುತ್ತೀ?

**ಭಾಗಮ್ಮ:**— ಸುಮ್ಮನೆ ಬಿದ್ದಿರಿ ಅಂದರೆ! ನಿಮ್ಮ ಪುರಾಣ ಆಯಿತು; ನನ್ನ ಪುರಾಣ ಕೇಳಿ. ಮನೆಹೆಂಗುಸರು, ಸುಮ್ಮನೆ ಅಡುಗೆ ಮಾಡಿ ನಿಮ್ಮಂಥ ಕೋಣಗಳನ್ನು ಸಾಕುತ್ತಾರೆ ಎಂದು ಇಷ್ಟು ಸೊಕ್ಕಿನ ಮಾತು. ಬೆಳಗಿಂದ ಮಧ್ಯಾಹ್ನದ ತನಕ ಹೊಲ ದಲ್ಲಿ ಕಡಿದುಬಂದರೇ ಅನ್ನಹಾಕುವುದು ಎಂದು ಆಗಿದ್ದರೆ, ಇಷ್ಟು ನಾಲಿಗೆ ಸಡಿಲು ಆಗುತ್ತಿರಲಿಲ್ಲ ನಿಮ್ಮದು. ಅಗ್ಗದ ಕೂಳು ತಿಂದು, ದಾರಿ ಮೇಲೆ ಹೋಗುವವರನ್ನೆಲ್ಲ ಬೈಯುತ್ತಾ ಇರುವುದು ಕೆಲಸವಾಗಿದೆ ನಿಮಗೆ . . . . ಆನೆಮರಿ, ತಾಟಕಿ ಶೂರ್ಪನಖಿ, ಪೂತನಿಯಂತೆ! ನೀವೆಂಥವರೆಂದುಬೊಗಳುತ್ತೀರಾ ರಂಗಣ್ಣಯ್ಯ! ಬೆಳಿಗ್ಗೆ ಭಟ್ಟರ ಮಗಳ ಮುಂದೆ ಏನು ಎಂದಿರಿ! ೧೦ ತಿಂಗಳಾಯಿತು ಎಂದೇ! ಆ ಮಗುವು ನಿಮ್ಮ ನಿಂದೆಯನ್ನು ಕೇಳಿ ಕೆರೆಹಾರಿತಲ್ಲಾ. ಯಾರೋ ಪುಣ್ಯಾತ್ಮರು ಕಂಡು ತೆಗೆದು ದಕ್ಕಾಯಿತು. ಇಲ್ಲದಿದ್ದರೆ ಯಾರಿಗೆ ಆ ಪುಣ್ಯ! ಬಡವರ

ಮನೆ ಮಗಳು, ಗಂಡ ಇಲ್ಲ ಎಂದ ಮಾತ್ರಕ್ಕೆ ಇಷ್ಟು ನಾಲಿಗೆ ಸಡಿಲು ಬಡಬೇಕೆ? ಅವಳಿಗೆ ೧೦ ತಿಂಗಳಾಯಿತೇನು! ಬರುತ್ತೀರಾ? ದೇವರ ಮುಂದೆ ಹಾಗೆ ಪ್ರಮಾಣಮಾಡುತ್ತೀರಾ? ಎಲ್ಲೆಲ್ಲಿ ನಾಲಿಗೆ ಸಡಿಲುಬಿಟ್ಟರೆ ಸರಿಯಲ್ಲ. ಅವಳಂಥ ಶೀಲವಂತ ಹುಡುಗಿ ನಿಮ್ಮ ಕುಲದಲ್ಲಿ ಹುಟ್ಟಿದ್ದಾಳೆಯೆ ಎಂದು ನೋಡಿಕೊಳ್ಳಿ . . . .

ಇನ್ನು ಅವರಂಥ ನಾಚಿಕೆ ಇಲ್ಲದಿದ್ದವರ ಪುರಾಣ ಕೇಳುವವರು ನೀವೂ ಒಂದು ಗಂಡುಸರು. ಇಲ್ಲಿಗೆ ಬನ್ನಿ ಇನ್ನು ಮುಂದಕ್ಕೆ ಏ ದಾಸ! ನಿನಗೂ ಹೆಂಡಿರುಮಕ್ಕಳಿಲ್ಲವೋ ಮನೆಯಲ್ಲಿ? ಇಲ್ಲೇನು ಛತ್ರ ಇಡಿಸುತ್ತಾರಂತೇನು?

**ರಂಗ:**—ರಾಮಣ್ಣ, ನನಗೆ ಮಣೆಗಾರರು ಬರಲಿಕ್ಕೆ ಹೇಳಿದ್ದರು. ಹೋಗಿ ಬರುತ್ತೇನೆ!

**ಭಾಗ:**—ಎಲ್ಲಿಗೆ ಹೋಗುವುದು, ನಿಲ್ಲಿ. ನನ್ನ ಗಂಡನ ಮುಂದೆ ಏನೇನು ಬೈದಿರಲ್ಲ, ನಿಮ್ಮ ನಂಜಮ್ಮನ ಮುಂದೆ ಇಷ್ಟು ಸಹಸ್ರನಾಮ ಮಾಡುತ್ತೇನೆ. ಕೇಳಿ ಹೋಗಿ— ನಂಜಮ್ಮಾ, ನಂಜಮ್ಮಾ. . .

**ರಂಗ:**—ದಮ್ಮಯ್ಯಾ ಮಹಾರಾಯಿತೀ......

**ಭಾಗ:**—"ದಮ್ಮಯ್ಯ, ಮಹಾರಾಯಿತೀ" ಈಗ ಬರುತ್ತದೆ. ಏ ನಂಜಮ್ಮ, ಇಲ್ಲಿ ಬಾರೇ! ನಿನ್ನ ಗಂಡ ಹರಿಶ್ಚಂದ್ರನ ಪುರಾಣ ಹೇಳುತ್ತೇನೆ - ಕೇಳು ಬಾ. ರಂಗಣ್ಣಯ್ಯ, ನಿಮ್ಮ ನಾಲಿಗೆ ಸೌಭಾಗ್ಯ ಕಂಡೇ ದೇವರು ನಿಮಗೆ ಮಕ್ಕಳನ್ನು ಕೊಡಲಿಲ್ಲ... ಅಲ್ಲವೆ ನೀವು ಪಡೆದುಬಂದ ಪುಣ್ಯಕ್ಕೋ . . . .

(ಅಷ್ಟರಲ್ಲಿ ಭಾಗಮ್ಮನ ಕರೆಯನ್ನು ಕೇಳಿ ಒಳಗಿಂದ ರಂಗಣ್ಣನ ಮಡದಿ ನಂಜಮ್ಮನು ಬರುವಳು. ತೀರ ಸ್ಥೂಲ ಶರೀರ. ಈಗಾಗಲೇ ಕೂದಲು ನೆರೆತಿದೆ. ತಲೆಯು ನೆರೆಗೂದಲು ಕರಿಮುಖದ ಮೇಲೆ ಒಡೆದು ಕಾಣುತ್ತದೆ.)